# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಅಕ್ಟೋಬರ್ 07, 2020

ಸಂಪುಟ : 47 ಸಂಚಿಕೆ : 148 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


# ವಿಚಾರಣೆಗೆಂದು ಹೋದವ ಶವವಾಗಿ ಪತ್ತೆ

## ಪೊಲೀಸರಿಂದ ಹಲ್ಲೆ : ಮೃತನ ಪತ್ನಿ, ಸಂಬಂಧಿಕರ ಆರೋಪ



ದಾವಣಗೆರೆ, ಅ.6- ಮಾಯಕೊಂಡ ಸಮೀಪದ ವಿಠಲಾಪುರ ಗ್ರಾಮದ ಮರುಳಸಿದ್ದಪ್ಪ ಎಂಬ ವ್ಯಕ್ತಿಯನ್ನು ವಿಚಾರಣೆ ಗೆಂದು ಪೊಲೀಸ್ ಠಾಣೆಗೆ ಕರೆತಂದು, ಹಲ್ಲೆ ನಡೆಸಿ ಆತನ ಸಾವಿಗೆ ಕಾರಣ ರಾಗಿದ್ದಾರೆ ಎಂದು ಮಾಯ ಕೊಂಡ ಠಾಣೆ ಪೊಲೀಸರ ವಿರುದ್ಧ ಮೃತನ ಪತ್ನಿ ಹಾಗೂ ಸಂಬಂಧಿಕರು ಗಂಭೀರ ಆರೋಪ ಮಾಡಿದ್ದಾರೆ.

ಮೃತ ಮರುಳಸಿದ್ದಪ್ಪ (47) ಈಗಾಗಲೇ ಮದುವೆಯಾಗಿದ್ದರೂ, ಬೇರೊಂದು ಮದುವೆಯಾಗುವ ಮಾತು ಕೇಳಿ ಬಂದಿದ್ದವು ಎನ್ನಲಾಗಿದ್ದು, ಹಲವು ದಿನಗಳಿಂದ ಕಾಣೆಯಾಗಿದ್ದ ಈತನನ್ನು ಹುಡುಕಿ ಅವರ ವಿವಾಹ ತಡೆಯುವಂತೆ ಈತನ ಪತ್ನಿ ವೃಂದಮ್ಮ ಭಾನುವಾರ ಠಾಣೆಯಲ್ಲಿ ದೂರು ಸಲ್ಲಿಸಿದ್ದರು.

ಮಹಿಳೆ ನೀಡಿದ ದೂರು ಆಧರಿಸಿ ನಿನ್ನೆ ರಾತ್ರಿ ಮಾಯಕೊಂಡ ಪೊಲೀಸ್ ಠಾಣೆಗೆ ಹುಚ್ಚವ್ವನಹಳ್ಳಿಯಲ್ಲಿದ್ದ ಮರುಳಸಿದ್ದಪ್ಪನನ್ನು ವಿಚಾರಣೆಗೆ ಕರೆತರಲಾಗಿತ್ತು.

ಮರುಳಸಿದ್ದಪ್ಪನ ಭೇಟಿಗೆಂದು ಸಂಬಂಧಿಕರು ಇಂದು ಬೆಳಿಗ್ಗೆ ಪೊಲೀಸ್ ಠಾಣೆಗೆ ಬಂದಾಗ ಸಮೀಪದ ಉಗ್ರಾಣ ನಿಗಮದ ಮುಂದಿನ ಬಸ್ ನಿಲ್ದಾಣದಲ್ಲಿ ಈತನ ಶವ ಪತ್ತೆಯಾಗಿದ್ದನ್ನು ಪೊಲೀಸರು ತೋರಿಸಿದ್ದಾರೆ.

ಶವ ನೋಡಿ ಆತಂಕಿತರಾದ ಮೃತನ ಪತ್ನಿ ಮತ್ತು ಸಂಬಂಧಿಕರು ಪೊಲೀಸರ ನಡೆ ಮೇಲೆ ಅನುಮಾನ ವ್ಯಕ್ತಪಡಿಸಿದ್ದು, ವಿಚಾರಣೆ ವೇಳೆ ಠಾಣೆಯಲ್ಲಿಯೇ ಪೊಲೀಸರು ಹಲ್ಲೆ ಮಾಡಿ ಅಲ್ಲಿಗೆ ತಂದು ಹಾಕಿದ್ದಾರೆ ಎಂದು ಆರೋಪಿಸಿದ್ದಾರೆ.

ರಾತ್ರಿ ಒಂದು ಗಂಟೆವರೆಗೂ ಮರಳಸಿದ್ದಪ್ಪನನ್ನು ಸಂಬಂಧಿಕರು ಭೇಟಿ ಮಾಡಿದ್ದಾರೆ. ಮನೆಗೆ ಕಳುಹಿಸುವಂತೆ ಕೇಳಿಕೊಂಡರೂ ಪೊಲೀಸರು ಕಳುಹಿಸಲಿಲ್ಲ. ಆದರೆ, ಠಾಣೆಯ ಸಬ್ ಇನ್ ಸ್ಪೆಕ್ಟರ್ ರಾತ್ರಿ ಮರಳಸಿದ್ದಪ್ಪ ಅವರಿಗೆ ಎದೆ ನೋವು ಬಂದಿದೆ ಎಂದಿದ್ದರಿಂದ ಬಿಟ್ಟು ಕಳುಹಿಸಿದ್ದೇವೆ ಎಂಬುದಾಗಿ ನಮಗೆ ತಿಳಿಸಿದ್ದಾರೆ ಎಂದು ಮೃತನ ಸಂಬಂಧಿ ಸುರೇಶ್ ತಿಳಿಸಿದ್ದಾರೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ (3ನೇ ಪುಟಕ್ಕೆ)




ಬಸ್ ನಿಲ್ದಾಣದ ಬೆಂಚ್ ಮೇಲೆ ಇರುವ ಶವವನ್ನು ಸಂಬಂಧಿಕರಿಗೆ ತೋರಿಸುತ್ತಿರುವ ಪೊಲೀಸರು

**ಲಾಕ್ ಅಪ್ ಡೆತ್ !!!**

## ಎಸ್ಐ ಸೇರಿ ಮೂವರು ಅಮಾನತ್ತು

ಪೊಲೀಸ್ ಠಾಣೆಗೆ ವಿಚಾರಣೆಗೆ ಹಾಜರಾಗಿದ್ದ ವಿಠಲಾಪುರ ಗ್ರಾಮದ ಮರುಳಸಿದ್ಧಪ್ಪನ ಸಾವು ಲಾಕಾಪ್ ಡೆತ್ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಯಕೊಂಡ ಪೊಲೀಸ್ ಠಾಣೆಯ ಸಬ್ ಇನ್ ಸ್ಪೆಕ್ಟರ್ ಸೇರಿದಂತೆ ಮೂವರನ್ನು ಅಮಾನತುಪಡಿಸಲಾಗಿದೆ.

ಸಬ್ ಇನ್ ಸ್ಪೆಕ್ಟರ್ ಪ್ರಕಾಶ್, ಮುಖ್ಯ ಪೇದೆ ನಾಗರಾಜ್ ಮತ್ತು ಪೇದೆ ಶೇರ್ ಅಲಿ ಸೇವೆಯಿಂದ ಅಮಾನತ್ತುಗೊಂಡವರು.

ಪೊಲೀಸ್ ಕಸ್ಟಡಿಯಲ್ಲೇ ಸಾವು ಸಂಭವಿಸಿದೆ ಎಂಬುದರ ಬಗ್ಗೆ ತನಿಖೆ ಮಾಡುತ್ತಿದ್ದೇವೆ. (2ನೇ ಪುಟಕ್ಕೆ)

## ಕುರುಬ ಸಮುದಾಯ ಎಸ್‌ಟಿಗೆ ಸೇರ್ಪಡೆ

### 11ಕ್ಕೆ ಬೆಂಗಳೂರಿನಲ್ಲಿ ಜನಪ್ರತಿನಿಧಿಗಳ ಸಭೆ

ಬೆಂಗಳೂರು, ಅ. 6 - ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸುವಂತೆ ರಾಜ್ಯ ಮತ್ತು ಕೇಂದ್ರದ ಮೇಲೆ ಒತ್ತಡ ತರಲು ಸಮುದಾಯದ ಜನಪ್ರತಿನಿಧಿಗಳು ಇದೇ 11 ರಂದು ನಗರದಲ್ಲಿ ಸಭೆ ನಡೆಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾಗಿನೆಲೆ ಕನಕ ಗುರು ಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಅವರು, ನಗರದ ಅರಮನೆ ಮೈದಾನದಲ್ಲಿ ನಡೆಯುವ ಈ ಸಭೆಯಲ್ಲಿ ನಮ್ಮ ಸಮುದಾಯದ ಸಂಸದರು, ವಿಧಾನಸಭೆ, ವಿಧಾನಪರಿಷತ್ ಸದಸ್ಯರು, ಜಿಲ್ಲಾ, ತಾಲ್ಲೂಕು ಮತ್ತು ಇತರೆ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದಿದ್ದಾರೆ. ನಮ್ಮ ಸಮುದಾಯದ ಮಾಜಿ (2ನೇ ಪುಟಕ್ಕೆ)

## ಸಾರ್ವಜನಿಕ ಉತ್ಸವಗಳಿಗೆ ಕೇಂದ್ರದ ಮಾರ್ಗಸೂಚಿ

ನವದೆಹಲಿ, ಅ. 6- ಪ್ರಮುಖ ಹಬ್ಬದ ದಿನಗಳು ಬರುತ್ತಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕವಾಗಿ ಹಬ್ಬ ಹಾಗೂ ಉತ್ಸವಗಳನ್ನು ಆಚರಿಸಲು ಕೇಂದ್ರ ಆರೋಗ್ಯ ಸಚಿವಾಲಯ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಅದರ ಅನ್ವಯ ಧಾರ್ಮಿಕ ಉತ್ಸವಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಜೊತೆಗೆ, ಮೂರ್ತಿಗಳು ಹಾಗೂ ಧರ್ಮಗ್ರಂಥಗಳನ್ನು ಸ್ಪರ್ಷಿಸುವ ಹಾಗಿಲ್ಲ.

ಉತ್ಸವದ ಸಂದರ್ಭಗಳಲ್ಲಿ ಸಾಧ್ಯವಾದಷ್ಟು ಸಂಗೀತ ಹಾಗೂ ಹಾಡುಗಳನ್ನು ನುಡಿಸಬೇಕು. ಸಾಮೂಹಿಕ ಗಾಯನ ಗೋಷ್ಠಿಗಳಿಗೆ ಅವಕಾಶ ನೀಡಬಾರದು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಸೋಂಕು (3ನೇ ಪುಟಕ್ಕೆ)

## ಕೊರೊನಾ ವಾರಿಯರ್ಸ್‌ಸಾವು

### 95 ಕುಟುಂಬಗಳಿಗೆ ಕೇಂದ್ರದಿಂದ ಪರಿಹಾರ

ನವದೆಹಲಿ, ಅ. 6- ಕೋವಿಡ್ ಚಿಕಿತ್ಸೆಗಾಗಿ ಮುಂಚೂಣಿಯಲ್ಲಿ ಕೆಲಸ ಮಾಡುವವರು ಮೃತಪಟ್ಟಾಗ 50 ಲಕ್ಷ ರೂ.ಗಳ ಪರಿಹಾರ ನೀಡುವ ಯೋಜನೆ ಅನ್ವಯ ಇದುವರೆಗೂ 95 ಪ್ರಕರಣಗಳಲ್ಲಿ ಪಾವತಿ ಮಾಡಲಾಗಿದೆ. ಇನ್ನೂ 176 ಕ್ಲೇಮುಗಳ ಪರಿಶೀಲನೆ ನಡೆದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ (3ನೇ ಪುಟಕ್ಕೆ)

## ಶಾಲೆ ಆರಂಭ : ಪರಿಣಿತರಿಂದ ವರದಿ

ಬೆಂಗಳೂರು, ಅ. 6 – ರಾಜ್ಯದಲ್ಲಿ ಶಾಲಾ - ಕಾಲೇಜುಗಳನ್ನು ತೆರೆಯುವ ಬಗ್ಗೆ ವೈದ್ಯರೂ ಸೇರಿದಂತೆ ಪರಿಣಿತರ ಸಮಿತಿಯಿಂದ ವರದಿ ಪಡೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಆರೋಗ್ಯ ಸಚಿವ ಬಿ. ಶ್ರೀರಾಮುಲು ತಿಳಿಸಿದ್ದಾರೆ.


ಶಾಲಾ - ಕಾಲೇಜುಗಳನ್ನು ಮತ್ತೆ ತೆರೆಯಲು ಅನುಮತಿ ನೀಡಿರುವ ಕೇಂದ್ರ ಸರ್ಕಾರ, ಈ ಬಗ್ಗೆ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಅ.15ರ ನಂತರ ಶಾಲೆಗಳನ್ನು ತೆರೆಯುವ ಕುರಿತು ರಾಜ್ಯಗಳೇ ನಿರ್ಧರಿಸಬೇಕು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಶಿಕ್ಷಣ ಇಲಾಖೆಯು ಶಾಲೆಗಳನ್ನು ತೆರೆಯುವ ಕುರಿತು ಆರೋಗ್ಯ ಇಲಾಖೆಯ ಸಲಹೆ ಕೇಳಿದೆ.

ಶಾಲೆ ಹಾಗೂ ಕಾಲೇಜುಗಳನ್ನು ತೆರೆಯುವ ಮುಂಚೆ ಪರಿಣಿತರ ಸಮಿತಿ ಹಾಗೂ ಮಕ್ಕಳ ವೈದ್ಯರೂ ಸೇರಿದಂತೆ ವೈದ್ಯರು ಹಾಗೂ ಮನೋವೈದ್ಯರ ಅಭಿಪ್ರಾಯವನ್ನು ಕೇಳಲಾಗುವುದು ಎಂದು ಶ್ರೀರಾಮುಲು ತಿಳಿಸಿದ್ದಾರೆ.

ವಿದ್ಯಾರ್ಥಿಗಳಲ್ಲಿನ ಭೀತಿ (3ನೇ ಪುಟಕ್ಕೆ)

## ಕಲಾವಿದ ಕೊಡಗನೂರು ಜಯಕುಮಾರ್ ಇನ್ನಿಲ್ಲ



ದಾವಣಗೆರೆ, ಅ.6 - ರಂಗಭೂಮಿ, ಚಲನಚಿತ್ರ, ಕಿರುತೆರೆಗಳ ಹಿರಿಯ ಕಲಾವಿದರೂ, ಜ್ಯೂನಿಯರ್ ರಾಜಕುಮಾರ್ ಎಂದೇ ಹೆಸರಾಗಿದ್ದ ದಾವಣಗೆರೆ ತಾಲ್ಲೂಕಿನ ಕೊಡಗನೂರಿನ ಜಯಕುಮಾರ್ ಅವರು ಇಂದು ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು.

ಮೂಲತಃ ಕೊಡಗನೂರು ಗ್ರಾಮದವರಾದ ಜಯಕುಮಾರ್ ಅವರಿಗೆ ಸುಮಾರು 72 ವರ್ಷ ವಯಸ್ಸಾಗಿತ್ತು. ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ಅವರು, ಕೆಲ ತಿಂಗಳುಗಳ ಹಿಂದೆ ಶಸ್ತ್ರ ಚಿಕಿತ್ಸೆಗೊಳಗಾಗಿದ್ದರು. ಚಿಕಿತ್ಸೆಗೆಂದು ಇಂದು ಬೆಳಿಗ್ಗೆ ಸ್ಥಳೀಯ ಎಸ್. ಎಸ್. ಹೈಟೆಕ್ ಆಸ್ಪತ್ರೆಗೆ ಹೋಗಿ ವಾಪಸ್ ಮನೆಗೆ ಹೋಗುವ ಸಂದರ್ಭದಲ್ಲಿ ಕೊನೆಯುಸಿರೆಳೆದಿದ್ದಾರೆ.

ಪತ್ನಿ, ಐವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗ ಮತ್ತು ಅಭಿಮಾನಿಗಳನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರದ ಅಂತ್ಯಕ್ರಿಯೆಯು ನಾಳೆ ದಿನಾಂಕ 7ರ ಬುಧವಾರ ಬೆಳಿಗ್ಗೆ 10.30ಕ್ಕೆ ಕೊಡಗನೂರಿನಲ್ಲಿ ನಡೆಯಲಿದೆ ಎಂದು ಅವರ ಕುಟುಂಬ ವರ್ಗದವರು ತಿಳಿಸಿದ್ದಾರೆ.

**ಸಂಕ್ಷಿಪ್ತ ಪರಿಚಯ** : ಸುಮಾರು ನಾಲ್ಕೂವರೆ ದಶಕಗಳಿಂದ (3ನೇ ಪುಟಕ್ಕೆ)

## ಮಂದಿರದ ಬೆಳ್ಳಿ ಇಟ್ಟಿಗೆಗೆ ಸ್ವಾಗತ

### ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದಲೂ ಬೆಳ್ಳಿ ಇಟ್ಟಿಗೆ ಸಂಗ್ರಹವಾಗಲಿ: ಆವರಗೊಳ್ಳ ಶ್ರೀ

ದಾವಣಗೆರೆ, ಅ.6- ಜಿಲ್ಲೆಯ ಪ್ರತಿ ತಾಲ್ಲೂಕಿನಿಂದಲೂ ಒಂದೊಂದು ಬೆಳ್ಳಿ ಇಟ್ಟಿಗೆ ಪಡೆದು ದಾವಣಗೆರೆಯಲ್ಲಿ ಬೃಹತ್ ಕಾರ್ಯಕ್ರಮ ಏರ್ಪಡಿಸಿ ಅಯೋಧ್ಯೆಗೆ ಕಳುಹಿಸಿಕೊಡುವ ಕಾರ್ಯ ನಡೆಯಲಿ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ಆಶಿಸಿದರು.

ನಗರದ ಪಿ.ಜೆ. ಬಡಾವಣೆಯಲ್ಲಿನ ಶ್ರೀರಾಮ ಮಂದಿರದಲ್ಲಿ ಅಯೋಧ್ಯೆಗೆ ಕಳುಹಿಸುವ ಬೆಳ್ಳಿ ಇಟ್ಟಿಗೆ ಸ್ವಾಗತಿಸುವ ಪೂಜಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

**ಶ್ರೀರಾಮನ ಮೇಲಾಣೆ, ಈ ಕಾರ್ಯಕ್ರಮ ರಾಜಕೀಯ ಉದ್ದೇಶಕ್ಕಲ್ಲ - ಜಾಧವ್ ಸ್ಪಷ್ಟನೆ**

ದಾವಣಗೆರೆ ರಾಮ ಭಕ್ತರು ಕೇವಲ 25 ದಿನಗಳಲ್ಲಿ ಬೆಳ್ಳಿ ಇಟ್ಟಿಗೆ ತಯಾರಿಸಿ ರಾಷ್ಟ್ರಪ್ರೇಮ ಮೆರೆದಿದ್ದಾರೆ. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಿಸಿ ಆ ಮೂಲಕ ಹಿಂದೂ ಸಂಸ್ಕೃತಿ ಎತ್ತಿ ಹಿಡಿಯುವ ಉದ್ದೇಶದಿಂದ ಎಲ್ಲೆಡೆ ಇಂತಹ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ಹೇಳಿದರು.

ದಾವಣಗೆರೆಯನ್ನು ದೇವನಗರಿ ಎಂದು (3ನೇ ಪುಟಕ್ಕೆ)



ಅಯೋಧ್ಯೆಗೆ ಕಳುಹಿಕೊಡಲು ಸಿದ್ಧವಾಗಿರುವ ಬೆಳ್ಳಿ ಇಟ್ಟಿಗೆಗೆ ಮಂಗಳವಾರ ದಾವಣಗೆರೆ ಪಿಜೆ ಬಡಾವಣೆಯ ಶ್ರೀರಾಮಮಂದಿರದಲ್ಲಿ ಪೂಜೆ ಸಲ್ಲಿಸಲಾಯಿತು. ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹಾಗೂ ಇತರರಿದ್ದಾರೆ.




ಜಿಲ್ಲೆಯಲ್ಲಿ ತುರ್ತು ನೆರವಿಗಾಗಿ 13 'ಹೊಯ್ಸಳ' ವಾಹನಗಳನ್ನು ಜಿಲ್ಲಾ ಪೊಲೀಸರು ಸಜ್ಜುಗೊಳಿಸಿದ್ದಾರೆ.

## ಆಪತ್ತಿಗೊಂದೇ ಸಂಖ್ಯೆ 112

ದಾವಣಗೆರೆ, 6 - ಪೊಲೀಸ್ ನೆರವು, ಬೆಂಕಿ ಅವಘಡ ಹಾಗೂ ಆರೋಗ್ಯ ಇಲಾಖೆಯ ನೆರವಿನ ಸಹಾಯವಾಣಿಗಳನ್ನು '112'ರಲ್ಲಿ ವಿಲೀನಗೊಳಿಸಲಾಗಿದೆ. ಇದೊಂದೇ ಸಹಾಯವಾಣಿ ಮೂಲಕ ಸಾರ್ವಜನಿಕರು ತುರ್ತು ಸ್ಪಂದನೆ ಪಡೆದುಕೊಳ್ಳಬಹುದು ಎಂದು ಎಸ್ಪಿ ಹನುಮಂತರಾಯ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ದಾವಣಗೆರೆ ಸೇರಿದಂತೆ ರಾಜ್ಯದ ಮೂರು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಜಾರಿಗೆ ಬಂದಿದೆ. ಜಿಲ್ಲೆಯಲ್ಲಿ ಎರಡು ದಿನಗಳಿಂದ ಸಹಾಯವಾಣಿ ಆರಂಭವಾಗಿದೆ ಎಂದಿದ್ದಾರೆ.

**ಮೇಲ್ - ಆಪ್** : ಪೊಲೀಸ್, ಅಗ್ನಿಶಾಮಕ ಹಾಗೂ ಆಂಬ್ಯುಲೆನ್ಸ್‌ಗಾಗಿ 112 ಸಂಖ್ಯೆಗೆ ಕರೆ ಮಾಡಿದರೆ ಸಾಕು. ಈ ಸಂಖ್ಯೆಯು ಇ.ಆರ್.ಎಸ್.ಎಸ್. (ತುರ್ತು ಸ್ಪಂದನಾ ಬೆಂಬಲ ವ್ಯವಸ್ಥೆ) ಸಂಪರ್ಕಿಸುತ್ತದೆ. ಅಲ್ಲಿಂದ ಅಗತ್ಯ ನೆರವು ತಲುಪಿಸಲಾಗುತ್ತದೆ ಎಂದವರು ಹೇಳಿದ್ದಾರೆ.

**ಪೊಲೀಸ್ ಇಲಾಖೆ, ಅಗ್ನಿಶಾಮಕ ಹಾಗೂ ಆರೋಗ್ಯ ಇಲಾಖೆ ಸಹಾಯ ವಾಣಿಗಳ ವಿಲೀನ**

ದೂರವಾಣಿ ಕರೆಯಷ್ಟೇ ಅಲ್ಲದೇ ಇ-ಮೇಲ್ ಆದ ersskarnataka@gmail.com ಮೂಲಕ ನೆರವು ಕೇಳಬಹುದು. ಇಲ್ಲವೇ 112 India ಆಪ್ ಅನ್ನು ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

**15 ನಿಮಿಷಗಳಲ್ಲಿ ನೆರವು** : 112 ಕರೆಯು ಬೆಂಗಳೂರಿನ ಏಕೀಕೃತ ತುರ್ತು ಸ್ಪಂದನಾ ಕೇಂದ್ರ ಹಾಗೂ ಜಿಲ್ಲಾ ಸಮನ್ವಯ ಕೇಂದ್ರಕ್ಕೆ ತಲುಪುತ್ತದೆ. ಕರೆ ಬಂದ 15 (3ನೇ ಪುಟಕ್ಕೆ)

### 112ರ ಪ್ರಮುಖ ಅಂಶಗಳು

- ದೇಶಾದ್ಯಂತ ತುರ್ತು ಸ್ಪಂದನೆಗಾಗಿ ಒಂದೇ ಸಂಖ್ಯೆ
- ಕರೆ, ಇ-ಮೇಲ್, ಆಪ್, ವೆಬ್ ಮೂಲಕ ನೆರವು.
- ಕರೆ ಮಾಡಿದ ವ್ಯಕ್ತಿಯ ಗುರುತು ಸ್ವಯಂ ಚಾಲಿತವಾಗಿ ಪತ್ತೆ
- ವಾಹನಗಳ ಮೂಲಕ ತುರ್ತು ಸೇವೆಗೆ ವ್ಯವಸ್ಥೆ
- ಪೊಲೀಸ್, ಅಗ್ನಿಶಾಮಕ, ವೈದ್ಯಕೀಯ ನೆರವಿಗೆ ವ್ಯವಸ್ಥೆ
- ಕೇಂದ್ರೀಕೃತ ವ್ಯವಸ್ಥೆ ಮೂಲಕ ಸೇವೆಗಳ ಸಮನ್ವಯತೆ
- ಅತಿ ಕಡಿಮೆ ಸಮಯದಲ್ಲಿ ತುರ್ತು ಸ್ಥಿತಿಯ ನಿರ್ವಹಣೆ
- ತುರ್ತು ಸ್ಪಂದನಾ ವಾಹನದ ಮೇಲೆ ನಿರಂತರ ನಿಗಾ.

### ತುರ್ತು ನೆರವಿಗೆ 13 'ಹೊಯ್ಸಳ'

ಜಿಲ್ಲೆಯಲ್ಲಿ ತುರ್ತು ನೆರವಿಗಾಗಿ 13 ವಾಹನಗಳನ್ನು ಜಿಲ್ಲಾ ಪೊಲೀಸರು ಸಜ್ಜುಗೊಳಿಸಿದ್ದು, ಇದಕ್ಕೆ 'ಹೊಯ್ಸಳ' ಎಂಬ ಹೆಸರಿಡಲಾಗಿದೆ.

ಆರು ಸ್ಕಾರ್ಪಿಯೋ ಹಾಗೂ 7 ಇನ್ನೋವಾ ವಾಹನಗಳನ್ನು ಸಜ್ಜುಗೊಳಿಸಲಾಗಿದೆ. ಈಗಾಗಲೇ 65 ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ 26 ಚಾಲಕ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ಇದರ ನಿಯಂತ್ರಣ ಕೇಂದ್ರ ಬೆಂಗಳೂರು ಹಾಗೂ ತಮ್ಮ ಕಚೇರಿಯಲ್ಲಿರಲಿದೆ ಎಂದು ಎಸ್ಪಿ ಹನುಮಂತರಾಯ ತಿಳಿಸಿದ್ದಾರೆ.

## ಜನಪ್ರತಿನಿಧಿಗಳ ಬಂಧನಕ್ಕೆ ಪೊಲೀಸರ ಹಿಂಜರಿಕೆ : ಸುಪ್ರೀಂ

ನವದೆಹಲಿ, ಅ. 6 – ಅಪರಾಧಿಕ ಪ್ರಕರಣಗಳು ಬಾಕಿ ಇರುವ ಜನಪ್ರತಿನಿಧಿಗಳನ್ನು ಬಂಧಿಸಲು ಹಾಗೂ ನ್ಯಾಯಾಲಯಗಳ ಎದುರು ಹಾಜರು ಪಡಿಸಲು ಪೊಲೀಸರು ಹಿಂಜರಿಯುವುದು ಗಂಭೀರ ವಿಷಯ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಸಂಸದರು ಹಾಗೂ ಶಾಸಕರ ವಿರುದ್ಧ ಹಲವಾರು ಪ್ರಕರಣಗಳಿವೆ. ಆದರೆ, ಜನಪ್ರತಿನಿಧಿಗಳ ಒತ್ತಡದ ಕಾರಣದಿಂದಾಗಿ ಪೊಲೀಸರು ಕೆಲವೊಮ್ಮೆ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಜನಪ್ರತಿನಿಧಿಗಳ ವಿರುದ್ಧ ಇರುವ ಪ್ರಕರಣಗಳ ಕುರಿತು (3ನೇ ಪುಟಕ್ಕೆ)

## ಅ.15ರಿಂದ ಸಿನೆಮಾ ಆರಂಭ; ಮಾರ್ಗಸೂಚಿ ಪ್ರಕಟ

ನವದೆಹಲಿ, ಅ. 6 - ಕೊರೊನಾ ಕಾರಣದಿಂದಾಗಿ ಏಳು ತಿಂಗಳಿನಿಂದ ಮುಚ್ಚಲ್ಪಟ್ಟಿದ್ದ ಚಿತ್ರಮಂದಿರಗಳು ಅಕ್ಟೋಬರ್ 15ರಿಂದ ಮತ್ತೆ ಕಾರ್ಯಾರಂಭ ಮಾಡಲಿವೆ. ಆದರೆ, ಪ್ರೇಕ್ಷಕರ ನಡುವೆ ಒಂದು ಸೀಟಿನ ಅಂತರ ಇರಬೇಕು ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ.

ಜನರ ಸುರಕ್ಷತೆಗಾಗಿ ನಾವು ಚಿತ್ರಮಂದಿರಗಳಿಗೆ ಹಲವಾರು ಕೊರೊನಾ ಮಾರ್ಗಸೂಚಿಗಳನ್ನು ರೂಪಿಸಿದ್ದೇವೆ ಎಂದು ಜಾವಡೇಕರ್ ಹೇಳಿದ್ದಾರೆ.

ಶೇ.50ರಷ್ಟು ಸೀಟುಗಳನ್ನು ಮಾತ್ರ ತುಂಬಬೇಕು. ಇಬ್ಬರ ನಡುವೆ ಒಂದು ಸೀಟಿನ ಅಂತರ ಇರಬೇಕು. ಸಿನೆಮಾ ಹಾಲ್‌ನಲ್ಲಿ ಮಾಸ್ಕ್ ಧರಿಸುವುದು ಕಡ್ಡಾಯ ಎಂದವರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿರುವ ಅವರು, ಆನ್‌ಲೈನ್ ಬುಕ್ಕಿಂಗ್‌ಗೆ ಉತ್ತೇಜನ ನೀಡಲಾಗುವುದು. ಆದರೆ, ಸಿಂಗಲ್ ಸ್ಕ್ರೀನ್ ಥಿಯೇಟರ್‌ಗಳಲ್ಲಿ ಟಿಕೆಟ್ ನೇರವಾಗಿ (3ನೇ ಪುಟಕ್ಕೆ)

### ಚಿತ್ರಮಂದಿರ ತೆರೆದರೂ ಹೊಸ ಚಿತ್ರಗಳು ತಡ



ನವದೆಹಲಿ, ಅ. 6 – ಕೇಂದ್ರ ಸರ್ಕಾರ ಸಿನೆಮಾ ಮಂದಿರಗಳನ್ನು ತೆರೆಯಲು ಹಸಿರು ನಿಶಾನೆ ತೋರಿಸಿದೆಯಾದರೂ, ಪ್ರೇಕ್ಷಕರು ಹೊಸ ಚಿತ್ರ ನೋಡಲು ಇನ್ನೂ ಸಾಕಷ್ಟು ಸಮಯ ಬೇಕಾಗಲಿದೆ.

ಮಲ್ಟಿಪ್ಲೆಕ್ಸ್ ಹಾಗೂ ಸಿನೆಮಾ ಮಂದಿರಗಳು ಪುನರಾರಂಭಗೊಳ್ಳಲು ಏಳು ತಿಂಗಳ ಕಾಲ ಕಾಯಬೇಕಾಯಿತು. ಅಕ್ಟೋಬರ್ 15ರಿಂದ ಚಿತ್ರ ಪ್ರದರ್ಶನಕ್ಕೆ ಈಗ ಅವಕಾಶ ನೀಡಲಾಗಿದೆ.

ಆದರೆ, ಕೊರೊನಾ ಹೆದರಿಕೆಯನ್ನು ಕೈ ಬಿಟ್ಟು ಜನರು ಚಿತ್ರ ಮಂದಿರಕ್ಕೆ ಬರುತ್ತಾರೆಯೇ? ಅರ್ಧದಷ್ಟು ಸೀಟುಗಳನ್ನು ಮಾತ್ರ ತುಂಬಲು ಅವಕಾಶ ನೀಡುವುದರಿಂದ ಟಿಕೆಟ್ ದರ ಹೆಚ್ಚಾದರೆ ತೆರಲು ಜನರು ಮುಂದಾಗಲಿದ್ದಾರೆಯೇ? ಎಂಬ ಪ್ರಶ್ನೆಗಳಿಗೆ ಇನ್ನೂ ಉತ್ತರ ಸಿಗಬೇಕಿದೆ.

ಕೊರೊನಾದ ಸಂದಿಗ್ಧ ಪರಿಸ್ಥಿತಿಯಲ್ಲಿ ಹೊಸ (2ನೇ ಪುಟಕ್ಕೆ)


**ಹೃದಯಪೂರ್ವಕ ಅಭಿನಂದನೆಗಳು**



ದಾವಣಗೆರೆ ಜಿಲ್ಲೆಯ
ಜಗಳೂರು
ಪಟ್ಟಣ ಪಂಚಾಯಿತಿ
ಸದಸ್ಯರಾಗಿ ಕರ್ನಾಟಕ
ಸರ್ಕಾರದಿಂದ
ನಾಮನಿರ್ದೇಶನಗೊಂಡಿರುವ
ಹಿರಿಯ ಪತ್ರಕರ್ತರೂ,
'ಜನತಾವಾಣಿ'
ಉಪ ಸಂಪಾದಕರೂ ಆದ
ಶ್ರೀ ಬಿ.ಪಿ. ಸುಭಾನ್‌ಸಾಬ್
ಅವರಿಗೆ ಹೃದಯಪೂರ್ವಕ
ಅಭಿನಂದನೆಗಳು.

ಜನತಾವಾಣಿ ಬಳಗ

# ಕಲಾವಿದ ಜಯಕುಮಾರ್ ಇನ್ನಿಲ್ಲ

**(1ನೇ ಪುಟದಿಂದ)** ವೃತ್ತಿರಂಗ ಭೂಮಿ, ಚಲನಚಿತ್ರ ಮತ್ತು ಕಿರುತೆರೆಗಳಲ್ಲಿ ಕಲಾವಿದರಾಗಿ ಅಭಿನಯಿಸುವುದರ ಮೂಲಕ ತಮ್ಮದೇ ಆದ ಅಭಿಮಾನಿಗಳನ್ನು ಹೊಂದಿದ್ದರು. ಅವರು ನಿರ್ವಹಿಸುತ್ತಿದ್ದ ಪಾತ್ರಗಳಿಂದಾಗಿ ಜ್ಯೂನಿಯರ್ ಡಾ. ರಾಜಕುಮಾರ್ ಎಂದು ಹೆಸರಾಗಿದ್ದರು.

ಗುಬ್ಬಿ ವೀರಣ್ ಕಂಪನಿ, ಕೆ.ಬಿ.ಆರ್. ಡ್ರಾಮಾ ಕಂಪನಿ, ಶ್ರೀ ಕುಮಾರೇಶ್ವರ ನಾಟಕ ಸಂಘ, ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ, ಕರ್ನಾಟಕ ಕಲಾ ವೈಭವ ಸಂಘ, ಸಂಗಮೇಶ್ವರ ನಾಟಕ ಸಂಘ ಸೇರಿದಂತೆ, ಹಲವಾರು ಡ್ರಾಮಾ ಕಂಪನಿಗಳಲ್ಲಿನ ನಾಟಕಗಳಲ್ಲಿ ಜಯಕುಮಾರ್ ಅಭಿನಯಿಸಿದ್ದಾರೆ.

ಹಿರಿಯ ರಂಗಭೂಮಿ ಕಲಾವಿದರಾಗಿದ್ದ ಶ್ರೀಮತಿ ಚಿಂದೋಡಿ ಲೀಲಾ ಅವರ ಕೆಬಿಆರ್ ಡ್ರಾಮಾ ಕಂಪನಿಯಲ್ಲಿ 'ಪೊಲೀಸನ ಮಗಳು' ನಾಟಕದಲ್ಲಿ ಜಯಕುಮಾರ್ ಅವರು ಚಿಂದೋಡಿ ಲೀಲಾ ಅವರ ತಂದೆ ಮತ್ತು ಹಿರಿಯ ಪೊಲೀಸ್ ಅಧಿಕಾರಿಯ ಪಾತ್ರ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿತ್ತು. ಬೆಂಗಳೂರಿನ ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ನಡೆಯುತ್ತಿದ್ದ ಈ ನಾಟಕವು ಸಾವಿರಾರು ಪ್ರದರ್ಶನ ಕಂಡಿತ್ತು. ಅಂದು ಈ ನಾಟಕವನ್ನು ನೋಡಲೆಂದು ಸ್ವತಃ ಡಾ. ರಾಜಕುಮಾರ್ ಅವರು ಗುಬ್ಬಿ ವೀರಣ್ಣ ರಂಗಮಂದಿರಕ್ಕೆ ತೆರಳಿ ವೀಕ್ಷಿಸಿದ್ದರು. ರಾಜಕುಮಾರ್ ಅವರಿಂದ ಮೆಚ್ಚುಗೆಗೆ ಪಾತ್ರರಾಗಿದ್ದರು.

ತವರು ಮನೆ, ಬಸ್ ಕಂಡಕ್ಟರ್, ಗೌಡ್ರ ಗದ್ಲ, ನಾಯಕನಹಟ್ಟಿ ತಿಪ್ಪೇರುದ್ರ ಸ್ವಾಮಿ ಮಹಾತ್ಮೆ, ರಾಜವೀರ ಮದಕರಿ ನಾಯಕ, ಮುದುಕನ ಮದುವೆ, ಟಿಪ್ಪು ಸುಲ್ತಾನ್, ಗೋಮುಖ ವ್ಯಾಘ್ರ, ಎಚ್ಚಮ್ಮ ನಾಯಕ, ಕೊಂಡು ತಂದ ಗಂಡ ಸೇರಿದಂತೆ ಹಲವಾರು ನಾಟಕಗಳು ಜಯಕುಮಾರ್ ಅವರ ಕಲಾಭಿನಯಕ್ಕೆ ಕೀರ್ತಿ ತಂದುಕೊಟ್ಟಿದ್ದಲ್ಲದೇ, ಅವರ ಜನಪ್ರಿಯತೆಗೆ ತಂದುಕೊಟ್ಟ ನಾಟಕಗಳಾಗಿದ್ದವು.

ವೃತ್ತಿ ರಂಗಭೂಮಿಯಲ್ಲದೇ, ಸುಮಾರು 50ಕ್ಕೂ ಹೆಚ್ಚು ಚಲನಚಿತ್ರ ಮತ್ತು 20ಕ್ಕೂ ಹೆಚ್ಚು ಧಾರಾವಾಹಿಗಳಲ್ಲಿ ಜಯಕುಮಾರ್ ಅಭಿನಯಿಸಿದ್ದಾರೆ. ಅವರ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು ಕಳೆದ ವರ್ಷ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ 'ಕರ್ನಾಟಕ ರಾಜ್ಯೋತ್ಸವ' ಪ್ರಶಸ್ತಿ ನೀಡಿ ಗೌರವಿಸಿತ್ತು. ಕರ್ನಾಟಕದ ಸುವರ್ಣ ವರ್ಷದ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳ ಸಾಧಕರು 'ಸುವರ್ಣ ಕರ್ನಾಟಕ' ಪ್ರಶಸ್ತಿಯೊಂದಿಗೆ ಸನ್ಮಾನಕ್ಕೊಳಗಾದವರಲ್ಲಿ ಜಯಕುಮಾರ್ ಕೂಡಾ ಒಬ್ಬರಾಗಿದ್ದರು. ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿಗೂ ಭಾಜನರಾಗಿದ್ದರು.

**ಸಂತಾಪ :** ಕೊಡಗನೂರು ಜಯಕುಮಾರ್ ಅವರ ನಿಧನಕ್ಕೆ ಕರ್ನಾಟಕ ರಾಜ್ಯ ರಂಗಭೂಮಿ ಕಲಾವಿದರ ಒಕ್ಕೂಟದ ಅಧ್ಯಕ್ಷರೂ ಆದ ಹಿರಿಯ ರಂಗಭೂಮಿ ಕಲಾವಿದ ಕೆ.ವೀರಯ್ಯ ಸ್ವಾಮಿ, ಉಪಾಧ್ಯಕ್ಷರಾದ ಶ್ರೀಮತಿ ಸಾವಿತ್ರಿ ರಿತ್ತಿ, ಕಲಾವಿದರೂ ಆದ ಹಿರಿಯ ಪತ್ರಕರ್ತ ಬಸವರಾಜ ಐರಣಿ, ಜಿಲ್ಲಾ ಕಸಾಪ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ, ತಾಲ್ಲೂಕು ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ ಅವರುಗಳು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಜಯಕುಮಾರ್ ಅವರ ನಿಧನದ ವಿಷಯ ತಿಳಿದೊಡನೆ ಕರ್ನಾಟಕ ಬಯಲಾಟ ಅಕಾಡೆಮಿ ಸದಸ್ಯ ಎನ್.ಎಸ್. ರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಮತ್ತಿತರರು ಕೊಡಗನೂರಿನಲ್ಲಿರುವ ಮೃತರ ನಿವಾಸಕ್ಕೆ ಭೇಟಿ ನೀಡಿ ಜಯಕುಮಾರ್ ಅವರ ಅಂತಿಮ ದರ್ಶನ ಪಡೆದರು.

# ಉತ್ಸವಗಳಿಗೆ ಕೇಂದ್ರದ ಮಾರ್ಗಸೂಚಿ

**(1ನೇ ಪುಟದಿಂದ)** ಲಕ್ಷಣಗಳಿರದ ಸಿಬ್ಬಂದಿ ಹಾಗೂ ಆಗಮಿಸುವವರಿಗೆ ಮಾತ್ರ ಅವಕಾಶ ನೀಡಬೇಕೆಂದು ತಿಳಿಸಲಾಗಿದೆ. ಉತ್ಸವಗಳಲ್ಲಿ ಪಾಲ್ಗೊಳ್ಳುವ ಎಲ್ಲರೂ ಎಲ್ಲಾ ಸಮಯದಲ್ಲಿ ಮಾಸ್ಕ್ ಧರಿಸಿರಬೇಕು. ಅಲ್ಲದೇ, ಆರು ಅಡಿಗಳ ದೈಹಿಕ ಅಂತರವನ್ನು ಎಲ್ಲ ಸಂದರ್ಭಗಳಲ್ಲಿ ಕಾಯ್ದುಕೊಳ್ಳಬೇಕು ಎಂದು ತಿಳಿಸಲಾಗಿದೆ. ದೈಹಿಕ ಅಂತರ ಹಾಗೂ ಸ್ಯಾನಿಟೈಜ್ ಮಾಡಲು ನಿರಂತರವಾಗಿ ಸಾಧ್ಯವಾಗುವ ರೀತಿಯಲ್ಲಿ ಗುಂಪು ನಿಯಂತ್ರಣಕ್ಕೆ ಯೋಜನೆ ರೂಪಿಸಬೇಕು ಎಂದು ತಿಳಿಸಲಾಗಿದೆ.

# ಅ.15ರಿಂದ ಸಿನೆಮಾ ಆರಂಭ

**(1ನೇ ಪುಟದಿಂದ)** ಮಾರಲು ಅವಕಾಶ ನೀಡಲಾಗುವುದು ಎಂದವರು ತಿಳಿಸಿದ್ದಾರೆ. ಸಿನೆಮಾ ಮಂದಿರದಲ್ಲಿ ಸೂಕ್ತ ವಾತಾನುಕೂಲ ಹಾಗೂ ಏರ್ ಕಂಡೀಷನ್ ಮಟ್ಟ 23 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗಿರಬೇಕು ಎಂದವರು ಹೇಳಿದ್ದಾರೆ. ಎರಡು ಶೋಗಳ ನಡುವೆ ಸಮರ್ಪಕ ಅಂತರ ಇರಬೇಕು. ಹಲವು ಹಂತಗಳಲ್ಲಿ ಪ್ರೇಕ್ಷಕರ ಆಗಮನ ಹಾಗೂ ನಿರ್ಗಮನಕ್ಕೆ ಅವಕಾಶ ಇರಬೇಕು ಎಂದು ತಿಳಿಸಲಾಗಿದೆ.

# ಶಾಲೆಗಳ ತೆರವು : ಪರಿಣಿತರಿಂದ ವರದಿ

**(1ನೇ ಪುಟದಿಂದ)** ಸೇರಿದಂತೆ ಶಾಲೆಗಳನ್ನು ತೆರೆಯಲು ಹಲವು ಸವಾಲುಗಳಿವೆ ಎಂದು ಹೇಳಿರುವ ಶ್ರೀರಾಮುಲು, ವಿದ್ಯಾರ್ಥಿಗಳು ಹಾಗೂ ಪೋಷಕರ ಮನಸ್ಸಿನಲ್ಲಿ ವಿಶ್ವಾಸ ಮೂಡಿಸಲು ವೈದ್ಯರು ಹಾಗೂ ಮನೋವೈದ್ಯರ ಜೊತೆ ಕಾರ್ಯ ನಿರ್ವಹಿಸಲಾಗುವುದು ಎಂದಿದ್ದಾರೆ.

# ಶವವಾಗಿ ಪತ್ತೆ

**(1ನೇ ಪುಟದಿಂದ)** ವರಿಷ್ಠಾಧಿಕಾರಿ ಹನುಮಂತರಾಯ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನೆ ಕುರಿತು ಪತ್ರಕರ್ತರೊಂದಿಗೆ ಮಾತನಾಡಿದ ಎಸ್ಪಿ, ಮೃತನ ಕಡೆಯವರಿಂದ ದೂರು ಪಡೆಯಲಾಗಿದೆ. ಸಿಸಿಟಿವಿಯಲ್ಲಿ ಸೆರೆಯಾದ ಮಾಹಿತಿ ಹಾಗೂ ಮರಣೋತ್ತರ ಪರೀಕ್ಷೆಯ ವರದಿ ಆಧರಿಸಿ ವ್ಯಕ್ತಿಯ ಸಾವಿನ ಬಗ್ಗೆ ಸೂಕ್ತ ತನಿಖೆ ನಡೆಸಲಾಗುವುದು. ಹಾಗೇನಾದರೂ ಪೊಲೀಸ್ ಇಲಾಖೆಯವರಿಂದಲೇ ತಪ್ಪುಗಳಾಗಿದ್ದರೆ ಸೂಕ್ತ ಕ್ರಮಕ್ಕೂ ಮುಂದಾಗುವುದಾಗಿ ಸ್ಪಷ್ಟಪಡಿಸಿದರು.

ಇಂದು ಸಂಜೆ ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಮೃತ ದೇಹವನ್ನು ತಂದಿದ್ದು, ಜಿಲ್ಲಾ ಪಂಚಾಯ್ತಿ ಸದಸ್ಯ ಕೆ.ಎಸ್. ಬಸವಂತಪ್ಪ ಹಾಗೂ ಇತರೆ ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಕೊರೊನಾ ವಾರಿಯರ್ಸ್ ಸಾವು

**(1ನೇ ಪುಟದಿಂದ)** 176 ಕ್ಲೇಮುಗಳನ್ನು ಪರಿಶೀಲಿಸುತ್ತಿದೆ. ಇದರ ಜೊತೆಗೆ 79 ಕ್ಲೇಮುಗಳನ್ನು ಈಗಾಗಲೇ ಇತ್ಯರ್ಥಪಡಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಮಾರ್ಚ್ 30ರಂದು 90 ದಿನಗಳ ಅವಧಿಗೆ ಆರೋಗ್ಯ ಕಾರ್ಯಕರ್ತರಿಗಾಗಿ 50 ಲಕ್ಷ ರೂ.ಗಳ ವಿಮೆ ಯೋಜನೆಯನ್ನು ಪ್ರಕಟಿಸಲಾಗಿತ್ತು. ಅದನ್ನು ಸೆಪ್ಟೆಂಬರ್ 25ರಂದು ಮತ್ತೆ ವಿಸ್ತರಿಸಲಾಗಿದೆ.

# ರಾಜಕೀಯ ದ್ವೇಷದಿಂದ ಸಿಬಿಐ ದುರ್ಬಳಕೆ

## ಜಗಳೂರಿನಲ್ಲಿ ಕಿಡಿ ಕಾರಿದ ಮಾಜಿ ಶಾಸಕ ಹೆಚ್.ಪಿ.ರಾಜೇಶ್



ಜಗಳೂರು, ಅ. 6- ಉಪ ಚುನಾವಣೆ ವೇಳೆ ಡಿ.ಕೆ. ಶಿವಕುಮಾರ್ ನಿವಾಸದ ಮೇಲೆ ಸಿಬಿಐ ದುರ್ಬಳಕೆ ಮಾಡಿಕೊಂಡು ಬಿಜೆಪಿ ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಆರೋಪಿಸಿದರು.

ಪಟ್ಟಣದ ಮಹಾತ್ಮ ಗಾಂಧಿ ವೃತ್ತದ ಬಳಿ ಇಂದು ನಡೆದ ಕಾಂಗ್ರೆಸ್ ನೇತೃತ್ವದ ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬಿಜೆಪಿ ಪಕ್ಷ ಕೊರೊನಾ ನಿಯಂತ್ರಣದ ಹೆಸರಿನಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆಸಿರುವುದು ಸಿಬಿಐ ಕಣ್ಣಿಗೆ ಗೋಚರವಾಗುವುದಿಲ್ಲವೇ? ತನ್ನ ವೈಫಲ್ಯ ಮುಚ್ಚಿಕೊಳ್ಳಲು ಸಿಬಿಐ ಅನ್ನು ಬಳಸಿಕೊಂಡು, ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಮಣಿಸುವ ಹುನ್ನಾರ ನಡೆಯುತ್ತಿದೆ ಎಂದರು.

ದೇಶದಲ್ಲಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ದಲಿತ ಹಿಂದುಳಿದ ವರ್ಗಗಳ ಹಾಗೂ ಮಹಿಳೆಯರ ಮೇಲೆ ನಿರಂತರ ದೌರ್ಜನ್ಯ, ಅತ್ಯಾಚಾರಗಳು ನಡೆಯುತ್ತಿದ್ದು, ಸೂಕ್ತ ಕಾನೂನು ಭದ್ರತೆಯಿಲ್ಲದೆ ಕೋಮುವಾದ ತಾಂಡವವಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹ್ಮದ್, ಮುಖಂಡರಾದ ಶಂಭುಲಿಂಗಪ್ಪ ಶೇಖರಪ್ಪ, ತಿಪ್ಪೇಸ್ವಾಮಿ ಗೌಡ, ಪ.ಪಂ. ಸದಸ್ಯ ಶಕೀಲ್ ಅಹ್ಮದ್, ಯುವ ಕಾಂಗ್ರೆಸ್ ಅಧ್ಯಕ್ಷ ಅಜಾಮುಲ್ಲಾ, ಶೇಖರಪ್ಪ, ಅಹ್ಮದ್ ಅಲಿ, ರಮೇಶ್ ಯಾದವ್, ವೆಂಕಟೇಶ್, ಮಹಿಳಾ ಕಾಂಗ್ರೆಸ್‌ನ ನಾಗರತ್ನಮ್ಮ ಕೆಂಚಪ್ಪ ಮತ್ತಿತರರು ಭಾಗವಹಿಸಿದ್ದರು.

# ಮಂದಿರದ ಬೆಳ್ಳಿ ಇಟ್ಟಿಗೆಗೆ ಸ್ವಾಗತ

**(1ನೇ ಪುಟದಿಂದ)** ಕರೆಯುತ್ತೇವೆ. ಇಲ್ಲಿನ ಮಣ್ಣಿನಲ್ಲಿ ಉತ್ಕೃಷ್ಟ ಶಕ್ತಿ ಇದೆ. ನಾಡು, ನುಡಿ, ಸಂಸ್ಕೃತಿಗಾಗಿ ಅಹೋರಾತ್ರಿ ಸೇವೆ ಸಲ್ಲಿಸುವ ಯುವ ಪಡೆಯೂ ಈ ಜಿಲ್ಲೆಯಲ್ಲಿದೆ. ಅಯೋಧ್ಯೆಗೆ ಬೆಳ್ಳಿ ಇಟ್ಟಿಗೆ ಕಳುಹಿಸುವ ಕಾರ್ಯ ಶ್ಲಾಘನೀಯವಾದದ್ದು. ಇದು ದೊಡ್ಡ ಪ್ರಮಾಣದಲ್ಲಿ ನಡೆಯಲಿ, ರಾಮಮಂದಿರ ನಿರ್ಮಾಣಕ್ಕೆ ಕೈ ಜೋಡಿಸಿ ರಾಷ್ಟ್ರಭಕ್ತಿ ಮೆರೆಸೋಣ ಎಂದು ಹೇಳಿದರು.

ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ರಾಮ ಮಂದಿರ ನಿರ್ಮಾಣಕ್ಕಾಗಿ 1990ರಲ್ಲಿ ಎಲ್.ಕೆ. ಅಡ್ವಾಣಿಯವರ ರಥಯಾತ್ರೆ ಸಮಯದಲ್ಲಿ ಹುತಾತ್ಮರಾದ 8 ಜನರು ಹಾಗೂ ನನ್ನನ್ನೂ ಸೇರಿ ಗಾಯಗೊಂಡ 72 ಜನರ ಆಸೆ ಈಗ ಈಡೇರಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸಮಯಕ್ಕೆ ಸರಿಯಾಗಿ 15 ಕೆ.ಜಿ. ಗಾತ್ರದ ಬೆಳ್ಳಿ ಇಟ್ಟಿಗೆಯನ್ನು ನಗರಕ್ಕೆ ತರಲಾಗಿದೆ. ಕೊರೊನಾ ಹಾಗೂ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸಾಂಕೇತಿಕವಾಗಿ ಸ್ವಾಗತಿಸಿ, ಪೂಜೆ ಸಲ್ಲಿಸಿ ಲಾಕರ್‌ನಲ್ಲಿ ಇಡಲಾಗುವುದು. ಮುಂದಿನ ದಿನಗಳಲ್ಲಿ ಬೃಹತ್ ಕಾರ್ಯಕ್ರಮ ನಡೆಸಿ ಇಟ್ಟಿಗೆಯನ್ನು ಅಯೋಧ್ಯೆಗೆ ಕಳುಹಿಸಿಕೊಡಲಾಗುವುದು ಎಂದು ಹೇಳಿದರು.

ರಾಮಮಂದಿರ ನಿರ್ಮಾಣದ ಟ್ರಸ್ಟಿಯೂ ಆಗಿರುವ ಪೇಜಾವರ ಶ್ರೀಗಳ ಮೂಲಕ ಹಸ್ತಾಂತರಿಸುವ ಉದ್ದೇಶ ಇರುವುದಾಗಿ ಇಂಗಿತ ವ್ಯಕ್ತಪಡಿಸಿದರು.

### ಶ್ರೀರಾಮನ ಮೇಲಾಣೆ, ರಾಜಕೀಯ ಉದ್ದೇಶಕ್ಕಲ್ಲ

ಶ್ರೀರಾಮನ ಮೇಲಾಣೆ ಮಾಡಿ ಹೇಳುತ್ತೇನೆ. ಅಯೋಧ್ಯೆಗೆ ಇಟ್ಟಿಗೆ ಕಳುಹಿಸುವ ಕಾರ್ಯಕ್ರಮವನ್ನು ರಾಜಕೀಯ ಉದ್ದೇಶಕ್ಕಾಗಿ ನಡೆಸುತ್ತಿಲ್ಲ ಎಂದು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಸ್ಪಷ್ಟಪಡಿಸಿದರು.

ಇತ್ತೀಚೆಗೆ ಕೆಲವರು ಸಾಮಾಜಿಕ ಜಾಲತಾಣಗಳ ಮೂಲಕ ನನ್ನ ಬಗ್ಗೆ ಅಪ ಪ್ರಚಾರ ಮಾಡುತ್ತಿದ್ದಾರೆ. ನಾನು ಎಂಎಲ್‌ಎ, ಎಂಎಲ್‌ಸಿ ಆಗಬೇಕೆಂದು ಈ ಕಾರ್ಯಕ್ರಮ ನಡೆಸುತ್ತಿಲ್ಲ. ರಥಯಾತ್ರೆ ವೇಳೆ ಬಲಿದಾನವಾದವರ ಹಾಗೂ ಗಾಯಗೊಂಡವರ ಇಚ್ಛೆಯನ್ನು ಪೂರೈಸುತ್ತಿದ್ದೇನೆ ಎಂದರು.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಸಹ, ಶ್ರೀರಾಮನ ಮೇಲೆಯೇ ಟೀಕೆಗಳು ಬಂದವು. ಅಂತಹದ್ದರಲ್ಲಿ ನಾವೆಲ್ಲ ಯಾವ ಲೆಕ್ಕ? ಉತ್ತಮ ಕಾರ್ಯಗಳನ್ನು ಮಾಡುವಾಗ ಟೀಕೆಗಳು ಸಹಜ ಎಂದರು.

1990ರ ಗಲಭೆ ವಿಷಯವನ್ನು ಇಂದಿನ ಯುವ ಜನತೆಗೆ ತಿಳಿಸಬೇಕಿದೆ. ಆ ಮೂಲಕ ಹಿಂದೂಗಳನ್ನು ಸಂಘಟಿಸಬೇಕಿದೆ. ಈ ನಿಟ್ಟಿನಲ್ಲಿ ಇಟ್ಟಿಗೆ ನಿರ್ಮಿಸಿ ಕಳುಹಿಸಲಾಗುತ್ತಿದೆ. ಇದರ ಬಗೆಗಿನ ಅಪಪ್ರಚಾರದಲ್ಲಿ ಅರ್ಥವಿಲ್ಲ ಎಂದರು.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ರಾಮ ಮಂದಿರ ನಿರ್ಮಾಣದ ಹೋರಾಟ 500 ವರ್ಷಗಳಿಗಿಂತಲೂ ಹಿಂದಿನದ್ದು. ಈ ಹೋರಾಟದಲ್ಲಿ ಲಕ್ಷಾಂತರ ಜನರು ಪ್ರಾಣಾರ್ಪಣೆ ಮಾಡಿದ್ದಾರೆ ಎಂದರು. ಹಿಂದೂಗಳು ಸಂಘಟಿತರಾಗಬೇಕಿದೆ. ಮತಾಂತರ ತಡೆಯಲು, ಹಿಂದುತ್ವ ಉಳಿಸಲು, ಪ್ರತಿಯೊಬ್ಬರೂ ಸಂಕಲ್ಪ ಮಾಡಬೇಕಿದೆ ಎಂದರು.

ಪಾಲಿಕೆ ಮೇಯರ್ ಬಿ.ಜಿ. ಅಜಯ್ ಕುಮಾರ್ ಬೆಳ್ಳಿ ಇಟ್ಟಿಗೆಗೆ ಪೂಜೆ ಸಲ್ಲಿಸಿ ತೆರಳಿದರು. ವೇದಿಕೆ ಮೇಲೆ ಉಪ ಮೇಯರ್ ಸೌಮ್ಯ ನರೇಂದ್ರ ಪವಾರ್ ಉಪಸ್ಥಿತರಿದ್ದರು. ಗೋಪಾಲರಾವ್ ಮಾನೆ ಸ್ವಾಗತಿಸಿದರು. ಬಿಗಿ ಪೊಲೀಸ್ ಕಾವಲಿನಲ್ಲಿ ಕಾರ್ಯಕ್ರಮ ನಡೆಯಿತು.

# ಬಂಧನಕ್ಕೆ ಹಿಂಜರಿಕೆ : ಸುಪ್ರೀಂ

**(1ನೇ ಪುಟದಿಂದ)** ತನಗೆ ವಿವರ ಸಲ್ಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಎನ್.ವಿ. ರಮಣ ನೇತೃತ್ವದ ಪೀಠ ಹೇಳಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಅನಿರುದ್ಧ ಬೋಸ್ ಅವರಿದ್ದಾರೆ.

# ಆಪತ್ತಿಗೊಂದೇ ಸಂಖ್ಯೆ 112

**(1ನೇ ಪುಟದಿಂದ)** ನಿಮಿಷಗಳಲ್ಲೇ ಇ.ಆರ್.ಎಸ್.ಎಸ್. ವಾಹನ ಸ್ಥಳಕ್ಕೆ ತಲುಪಿ ನೆರವು ಕಲ್ಪಿಸಲಿದೆ ಎಂದು ಹನುಮಂತರಾಯ ವಿವರಿಸಿದ್ದಾರೆ.

**ಪಾರದರ್ಶಕ ವ್ಯವಸ್ಥೆ :** ಹೊಯ್ಸಳ ಇ.ಆರ್.ಎಸ್.ಎಸ್. ವಾಹನಗಳ ಮೂಲಕ ನೀಡಲಾಗುವ ಸ್ಪಂದನೆ ಮೇಲೆ ನಿರಂತರ ನಿಗಾ ಇರುತ್ತದೆ. ದೂರು ನೀಡಿದವರಿಗೆ ಎಸ್.ಎಂ.ಎಸ್. ಮೂಲಕ ಮಾಹಿತಿ ನೀಡಿ, ಪಾರದರ್ಶಕ ವ್ಯವಸ್ಥೆ ತರಲಿದೆ ಎಂದು ಎಸ್ಪಿ ಹೇಳಿದ್ದಾರೆ.

**ಆಂಬ್ಯುಲೆನ್ಸ್ ಸೇರ್ಪಡೆ :** ಪ್ರಸಕ್ತ ಪೊಲೀಸ್ ಹಾಗೂ ಅಗ್ನಿಶಾಮಕ ದಳದ ಸೇವೆ ಮಾತ್ರ 112 ಮೂಲಕ ಲಭ್ಯವಿರಲಿದೆ. ಮುಂದಿನ ದಿನಗಳಲ್ಲಿ ಆಂಬ್ಯುಲೆನ್ಸ್ ಸೇವೆಯೂ ಇದೇ ಸಂಖ್ಯೆಯ ಮೂಲಕ ಲಭ್ಯವಾಗಲಿದೆ ಎಂದು ಹನುಮಂತರಾಯ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಅಗ್ನಿಶಾಮಕ ದಳದ ಅಧಿಕಾರಿ ಬಸವಪ್ರಭು ಶರ್ಮ, ಡಿವೈಎಸ್‌ಪಿ ಬಸವರಾಜ ಮತ್ತು ಇನ್ಸ್‌ಪೆಕ್ಟರ್ ಎಸ್. ತೇಜಾವತಿ ಉಪಸ್ಥಿತರಿದ್ದರು.

### 'ಒಂದು ದೇಶ, ಒಂದು ತುರ್ತು ಸಂಖ್ಯೆ - 112'

ಕೇಂದ್ರ ಗೃಹ ಸಚಿವಾಲಯ ವರ್ಷದ ಹಿಂದೆ ಇಡೀ ದೇಶಕ್ಕೆ ಒಂದೇ ತುರ್ತು ಸಂಖ್ಯೆಯಾಗಿ 112 ಆಯ್ಕೆ ಮಾಡಿತ್ತು. ಹಲವಾರು ರಾಜ್ಯಗಳಲ್ಲಿ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಅದರ ಅಂಗವಾಗಿ ಕರ್ನಾಟಕದಲ್ಲಿ ಪ್ರಾಯೋಗಿಕವಾಗಿ ದಾವಣಗೆರೆ, ಹಾವೇರಿ ಹಾಗೂ ಬಾಗಲಕೋಟೆಗಳಲ್ಲಿ ಈ ಯೋಜನೆ ಜಾರಿಗೆ ತರಲಾಗುತ್ತಿದೆ.

ಮುಂದಿನ ದಿನಗಳಲ್ಲಿ ಪೊಲೀಸ್, ಅಗ್ನಿಶಾಮಕ, ಆಂಬ್ಯುಲೆನ್ಸ್, ಮಹಿಳಾ ಸುರಕ್ಷತೆ, ಮಕ್ಕಳ ನೆರವು ಹೀಗೆ ಹಲವು ಬೇರೆ ಬೇರೆ ಸೇವೆಗಳಿಗೆ ಬೇರೆ ಸಂಖ್ಯೆ ನೆನಪಿಟ್ಟುಕೊಳ್ಳುವ ಗೊಡವೆ ತಪ್ಪಲಿದೆ.


## ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ಆರ್.ಟಿ.ಒ. ಕಚೇರಿ ಸಿಬ್ಬಂದಿಯಾದ ಶ್ರೀ ಎನ್. ಜಗದೀಶ್ ಮತ್ತು ಬಿಎಸ್‌ಎನ್‌ಎಲ್ ನಿವೃತ್ತ (VRS) ನೌಕರರಾದ ಶ್ರೀಮತಿ ಸುಲೋಚನ ಅವರ ಪುತ್ರ

**ವಿನಯ್ ಜೆ.** ಇವರು

2019-20ನೇ ಸಾಲಿನ ಎಂಎಸ್ಸಿ, ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ

**ಪ್ರಥಮ ರ್‍ಯಾಂಕ್‌ನೊಂದಿಗೆ ಎರಡು ಚಿನ್ನದ ಪದಕ**



ಪಡೆದಿರುತ್ತಾರೆ. ಇವರಿಗೆ ಹೃದಯಪೂರ್ವಕ ಅಭಿನಂದನೆಗಳು.



ಗೌರವಾಧ್ಯಕ್ಷರು, ಕಾರ್ಯಾಧ್ಯಕ್ಷರು, ಅಧ್ಯಕ್ಷರು, ಉಪಾಧ್ಯಕ್ಷರು

**ಜಿಲ್ಲಾ ಛಲವಾದಿ ಮಹಾಸಭಾ (ರಿ.) ದಾವಣಗೆರೆ.**



## "Intermediate Chess" ತರಬೇತಿ



ಈ ತರಬೇತಿಯನ್ನು WhatsAppನಲ್ಲಿ, ಆಡಿಯೋ, ವಿಡಿಯೋ, ಚಿತ್ರ ಮತ್ತು ಲೇಖನಗಳ ಮೂಲಕ ಪರಿಣಾಮಕಾರಿಯಾಗಿ ನೀಡಲಾಗುವುದು.

* ಪ್ರಾಥಮಿಕ ಹಂತದ ಚೆಸ್ ಆಟ ಬಲ್ಲವರಿಗೆ ಈ ತರಬೇತಿ
* ಅಕ್ಟೋಬರ್ 10 ರಿಂದ ಜನವರಿ 10 ರವರೆಗೆ 3 ತಿಂಗಳು
* ಸೋಮವಾರದಿಂದ ಬುಧವಾರದವರೆಗೆ ವಾರದಲ್ಲಿ 3 ದಿನ

ಹೆಚ್ಚಿನ ಮಾಹಿತಿಗೆ : **ಪ್ರಾಣೇಶ್ ಯಾದವ್**

ಅಂತರರಾಷ್ಟ್ರೀಯ ಚೆಸ್ ತೀರ್ಪುಗಾರರು ಮತ್ತು ಚೆಸ್ ತರಬೇತುದಾರರು

**92424 01702, 86181 08601**


## ನಗರಸಭೆ ಕಾರ್ಯಾಲಯ, ರಾಣೇಬೆನ್ನೂರು - 581115

ಕ್ರ ಸಂ: ನಸರಾ/24.10%,7.25% & 5%/ವಹಿ/01/2020-21 | ದಿನಾಂಕ :30.09.2020

### ಸಾರ್ವಜನಿಕ ಪ್ರಕಟಣೆ

ರಾಣೇಬೆನ್ನೂರು ನಗರದಲ್ಲಿ ವಾಸವಾಗಿರುವ ಪ.ಜಾತಿ/ಪ.ಪಂಗಡದ ಜನರಿಗೆ ಮತ್ತು ಇತರೆ ಬಡಜನರಿಗೆ ಹಾಗೂ ವಿಕಲಚೇತನರಿಗೆ ಈ ಪ್ರಕಟಣೆಯ ಮೂಲಕ ತಿಳಿಯಪಡಿಸುವುದೇನೆಂದರೆ, ಸನ್ 2020-21 ನೇ ಸಾಲಿನ ಅನುದಾನಕ್ಕೆ ಈ ಕೆಳಕಂಡಂತೆ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲು ಉದ್ದೇಶಿಸಿದ್ದು, ಕಾರಣ ದಿನಾಂಕ: 29.10.2020 ರೊಳಗಾಗಿ ಈ ಕೆಳಗಿನ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಪೌರಾಯುಕ್ತರು ನಗರಸಭೆ ರಾಣೇಬೆನ್ನೂರು ಇವರ ಹೆಸರಿಗೆ ಸಕಾಲ ವಿಭಾಗದಲ್ಲಿ ಸಲ್ಲಿಸಲು ಸೂಚಿಸಿದೆ.

### ಶೇ.24.10 ರಡಿ ಪ.ಜಾತಿ/ಪ.ಪಂಗಡದ ಜನರಿಗೆ

| ಕ್ರ.ಸಂ | ಕಾರ್ಯಕ್ರಮದ ವಿವರ | ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು |
|---|---|---|
| 1 | ನಗರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ/ಹೊರಗುತ್ತಿಗೆ ಪೌರ ಕಾರ್ಮಿಕರು/ ಲೋಡರ್ಸ್, ಡ್ರೈವರ್, ಸಫಾಯಿ ಕರ್ಮಚಾರಿ ಮತ್ತು ಸ್ಕ್ಯಾವೆಂಜರ್ಸ್‌ಗಳಿಗೆ ಮತ್ತು ಅವರ ಕುಟುಂಬದವರಿಗೆ ವೈದ್ಯಕೀಯ ವೆಚ್ಚ ಮತ್ತು ಮನೆ ನಿರ್ಮಾಣಕ್ಕೆ ಸಹಾಯಧನ ನೀಡುವುದು. | ವೈದ್ಯಕೀಯ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ ಮತ್ತು ಮೂಲ ಬಿಲ್‌ಗಳನ್ನು ಅರ್ಜಿಯೊಂದಿಗೆ ಹಾಜರಿಪಡಿಸಬೇಕು ಹಾಗೂ ಸದರಿ ಬಿಲ್‌ಗಳನ್ನು ದೃಢೀಕರಿಸಿ ನೀಡಬೇಕು ಮತ್ತು ಮನೆ ನಿರ್ಮಾಣಕ್ಕಾಗಿ ಅರ್ಜಿ ಸಲ್ಲಿಸುವವರು ಮನೆಯ ಚಾಲ್ತಿ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದು. |
| 2 | ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಪ.ಜಾತಿ/ ಪ.ಪಂಗಡದ ಅಂತರರಾಷ್ಟ್ರೀಯ/ ರಾಷ್ಟ್ರೀಯ/ ರಾಜ್ಯ/ ಜಿಲ್ಲಾ/ ತಾಲ್ಲೂಕು ಮಟ್ಟದ ಕ್ರೀಡೆ/ಕಲೆ/ ಸಾಂಸ್ಕೃತಿಕ ಹಾಗೂ ಇತರೆ ವ್ಯಾಸಂಗೇತರ ಚಟುವಟಿಕೆಗಳಲ್ಲಿ ಭಾಗವಹಿಸುವವರಿಗೆ | ವಿವಿಧ ಇಲಾಖೆಗಳಿಂದ ಆಯೋಜಿಸಲ್ಪಡುವ ಕ್ರೀಡೆ/ಕಲೆ/ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿದ/ಜಯ ಗಳಿಸಿರುವ ಬಗ್ಗೆ ದಾಖಲಾತಿಗಳು ಹಾಜರುಪಡಿಸುವುದು. |
| 3 | ನಗರ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಪ.ಜಾತಿ/ಪ.ಪಂಗಡದ ಜನರ ಎಂ.ಬಿ.ಬಿ.ಎಸ್, ಬಿ.ಇ. ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕಂಪ್ಯೂಟರ್/ಲ್ಯಾಪ್‌ಟಾಪ್ ಪಡೆಯಲು ಸಹಾಯಧನ ನೀಡುವುದು | ವ್ಯಾಸಂಗ ಮಾಡುತ್ತಿರುವ ಬಗ್ಗೆ ಸಂಬಂಧಿಸಿದ ಕಾಲೇಜಿನಿಂದ ವ್ಯಾಸಂಗ ಪ್ರಮಾಣ ಪತ್ರ ಹಾಜರಪಡಿಸಬೇಕು. ವಿದ್ಯಾರ್ಥಿಯು ಕಡ್ಡಾಯವಾಗಿ ಪ್ರತಿ ಸೆಮಿಸ್ಟರ ಉತ್ತೀರ್ಣಗೊಂಡ ಅಂಕಪಟ್ಟಿ ಲಗತ್ತಿಸಬೇಕು ಹಾಗೂ ಸದರಿ ಸೌಲಭ್ಯವನ್ನು ಸಮಾಜ ಕಲ್ಯಾಣ ಇಲಾಖಾ ಮತ್ತು ವ್ಯಾಸಂಗ ಮಾಡುತ್ತಿರುವ ಕಾಲೇಜುರವರಿಂದ ಪಡೆಯದೇ ಇರುವ ಬಗ್ಗೆ ದೃಢೀಕರಣ ಪತ್ರ ನೀಡುವುದು. |
| 4 | ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಪ.ಜಾತಿ/ಪ.ಪಂಗಡದ ಜನರು ಶಸ್ತ್ರ ಚಿಕಿತ್ಸೆಗೆ ಒಳಗಾದವರಿಗೆ ಯಶಸ್ವಿನಿ ಯೋಜನೆಯಡಿ ನಿಯಮಾನುಸಾರ ಆರ್ಥಿಕ ಸಹಾಯಧನ ಒದಗಿಸುವುದು. | ಯಶಸ್ವಿನಿ ಯೋಜನೆಯಡಿ ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಫಲಾನುಭವಿಯು ವೈದ್ಯಕೀಯ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡ ಬಗ್ಗೆ ದಾಖಲೆಗಳನ್ನು ಮತ್ತು ಮೂಲ ಬಿಲ್‌ಗಳನ್ನು ಅರ್ಜಿಯೊಂದಿಗೆ ಹಾಜರುಪಡಿಸಬೇಕು |
| 5 | ನಗರ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಪ.ಜಾತಿ/ಪ.ಪಂಗಡದ ಜನರಿಗೆ ಸಣ್ಣ ಉದ್ದಿಮೆ ಕೈಗೊಳ್ಳಲು ಆರ್ಥಿಕ ಸಹಾಯಧನ (ಯೋಜನಾ ವೆಚ್ಚದ ಶೇ.50 ರಷ್ಟು) ಹಾಗೂ ರೂ 1,50,000/- ಗಳಲ್ಲಿ ಯಾವುದು ಕಡಿಮೆ ಅಷ್ಟು ಮೊತ್ತ ಬ್ಯಾಕ್ ಎಂಡ್ ಸಬ್ಸಿಡಿ ಸಹಾಯಧನ ನೀಡುವುದು | ಸಣ್ಣ ಉದ್ದಿಮೆ ಮಾಡುವ ಬಗ್ಗೆ ದಾಖಲೆಗಳನ್ನು ಒದಗಿಸುವುದು, ಫಲಾನುಭವಿಯು ಸ್ವಯಂ ಉದ್ಯೋಗ ಮಾಡಲು ಬ್ಯಾಂಕಿನಿಂದ ಸಾಲ ಮಂಜೂರು ಮಾಡಿರುವ ಬಗ್ಗೆ ಬ್ಯಾಂಕಿನಿಂದ ಪತ್ರ ಒದಗಿಸುವುದು. |
| 6 | ನಗರ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳು ಎಂಬಿಬಿಎಸ್ /ಬಿಇ ವ್ಯಾಸಂಗಕ್ಕಾಗಿ ಮಾತ್ರ ಸರ್ಕಾರಿ ಅಥವಾ ಅನುದಾನಿತ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಲ್ಲಿ ಸೀಟು ಪಡೆದಿರುವ ವಿದ್ಯಾರ್ಥಿಗಳಿಗೆ ಶೇ.50 ರಷ್ಟು ಪ್ರವೇಶ ಶುಲ್ಕ ಪಾವತಿಸುವುದು | ವ್ಯಾಸಂಗ ಮಾಡುತ್ತಿರುವ ಬಗ್ಗೆ ಸಂಬಂಧಿಸಿದ ಕಾಲೇಜಿನಿಂದ ವ್ಯಾಸಂಗ ಪ್ರಮಾಣ ಪತ್ರ ಹಾಜರಪಡಿಸಬೇಕು. ವಿದ್ಯಾರ್ಥಿಯು ಕಡ್ಡಾಯವಾಗಿ ಪ್ರತಿ ವರ್ಷ ಉತ್ತೀರ್ಣಗೊಂಡ ಅಂಕಪಟ್ಟಿ ಲಗತ್ತಿಸಬೇಕು ಮತ್ತು ಸರ್ಕಾರಕ್ಕೆ ಭರಿಸುವ ಶುಲ್ಕದ ಕುರಿತು ಕಾಲೇಜಿನಿಂದ ದಾಖಲೆ ಒದಗಿಸುವುದು ಹಾಗೂ ಸದರಿ ಸೌಲಭ್ಯವನ್ನು ಸಮಾಜ ಕಲ್ಯಾಣ ಇಲಾಖೆ ಮತ್ತು ವ್ಯಾಸಂಗ ಮಾಡುತ್ತಿರುವ ಕಾಲೇಜುರವರಿಂದ ಪಡೆಯದೇ ಇರುವ ಬಗ್ಗೆ ದೃಢೀಕರಣ ಪತ್ರ ನೀಡುವುದು. |

### ಶೇ.7.25 ರಡಿ ಇತರೆ ಬಡ ಜನರಿಗೆ

| ಕ್ರ.ಸಂ | ಕಾರ್ಯಕ್ರಮದ ವಿವರ | ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು |
|---|---|---|
| 1 | ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಇತರೆ ಬಡಜನರ ಎಲ್‌ಎಲ್‌ಬಿ ಪದವಿ ಹೊಂದಿದ್ದು, ವೃತ್ತಿನಿರತ ವಕೀಲರುಗಳಿಗೆ ಆನ್‌ಲೈನ್ ಕಾನೂನು ಪುಸ್ತಕ ಭಂಡಾರಕ್ಕೆ 05 ವರ್ಷಗಳ ಅವಧಿಗೆ ನೀಡಬೇಕಾದ ಚಂದಾ ಶುಲ್ಕವನ್ನು ನೇರವಾಗಿ ಪಾವತಿಸಲಾಗುವುದು | ವಕೀಲ ವೃತ್ತಿ ಪ್ರಾರಂಭಿಸಲು ನೋಂದಣಿ ಮಾಡಿ ದಾಖಲೆ ಮತ್ತು ಇನ್ನಿತರೆ ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸುವುದು. |

### ಶೇ.5 ರಡಿ ವಿಕಲಚೇತನರಿಗೆ

| ಕ್ರ.ಸಂ | ಕಾರ್ಯಕ್ರಮದ ವಿವರ | ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು |
|---|---|---|
| 1 | ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ವಿಕಲಚೇತನರಿಗೆ ಪಕ್ಕಾ ಮನೆ ನಿರ್ಮಾಣಕ್ಕಾಗಿ ಸಹಾಯಧನ ನೀಡುವುದು. | ಸ್ವತ್ತು ಫಲಾನುಭವಿಯ ಹೆಸರಿಗಿದ್ದು ಇ-ಸ್ವತ್ತು ದಾಖಲೆ ಹೊಂದಿರಬೇಕು. |

ಮೇಲಿನ ಸೌಲಭ್ಯಗಳನ್ನು ಪಡೆಯಲು ಮೇಲ್ಕಾಣಿಸಿದ ದಾಖಲೆಗಳೊಂದಿಗೆ ಈ ಕೆಳಗಿನ ದಾಖಲೆಗಳನ್ನು ಎಲ್ಲಾ ಫಲಾನುಭವಿಗಳು ಕಡ್ಡಾಯವಾಗಿ ಸಲ್ಲಿಸಬೇಕು

1. ಆಧಾರ್/ ಚುನಾವಣೆ/ಪಡಿತರ ಚೀಟಿ/ಬ್ಯಾಂಕ್ ಪಾಸ್ ಪುಸ್ತಕದ ಪ್ರತಿಗಳನ್ನು ಲಗತ್ತಿಸಬೇಕು (ಆಧಾರ್ ಕಾರ್ಡ್ & ಬ್ಯಾಂಕ್ ಖಾತೆಯ ನಕಲು ಕಡ್ಡಾಯವಾಗಿ)
2. ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಚಾಲ್ತಿ ಸಾಲಿನದ್ದಾಗಿದ್ದು, ಕಡ್ಡಾಯವಾಗಿ R D No. ಹೊಂದಿರಬೇಕು. ಇಲ್ಲದಿದ್ದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
3. ಅರ್ಜಿಯ ಜೊತೆಗೆ ಫಲಾನುಭವಿಯ ಇತ್ತೀಚಿನ 2 ಪಾಸ್‌ಪೋರ್ಟ್ ಸೈಜಿನ ಪೋಟೋ ಲಗತ್ತಿಸಬೇಕು.
4. ಕಳೆದ ಸಾಲುಗಳಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳು ಅರ್ಜಿ ಸಲ್ಲಿಸಬಾರದು, ಸಲ್ಲಿಸಿದಲ್ಲಿ ಪರೀಶಿಲಿಸಿ ಫಲಾನುಭವಿಗಳಿಗೆ ತಿಳಿಸದೇ ತಿರಸ್ಕರಿಸಲಾಗುವುದು.
5. ಸದರಿ ಸೌಲಭ್ಯಗಳನ್ನು ಪಡೆಯಲು ಹಾಲಿ ಖಾಯಂ/ನೇರಪಾವತಿ ಆಧಾರದ ಮೇಲೆ ಪೌರಕಾರ್ಮಿಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಆದ್ಯತೆ ನೀಡಲಾಗುವುದ, ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ ದಾಖಲೆ ಲಗತ್ತಿಸಬೇಕು.
6. ಯಶಸ್ವಿನಿ ಯೋಜನೆಯಡಿ ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಫಲಾನುಭವಿಯು ವೈದಕೀಯ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ ಮತ್ತು ಮೂಲ ಬಿಲ್‌ಗಳನ್ನು ಅರ್ಜಿಯೊಂದಿಗೆ ಹಾಜರಪಡಿಸಬೇಕು.
7. ಅರ್ಜಿಯೊಂದಿಗೆ ಲಗತ್ತಿಸುವ ಎಲ್ಲಾ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಲಗತ್ತಿಸುವುದು.
8. ಲ್ಯಾಪ್‌ಟಾಪ್ ಮತ್ತು ವಿದ್ಯಾಭಾಸದ ಪ್ರವೇಶ ಶುಲ್ಕ ಪಡೆಯುವವರಿಗೆ ಕುಟುಂಬದ ವಾರ್ಷಿಕ ವರಮಾನ ರೂ.5.00 ಲಕ್ಷಗಳ ಮಿತಿಯೊಳಗಿರಬೇಕು.
9. ಮೇಲ್ಕಂಡ ಯಾವುದೇ ಒಂದು ದಾಖಲಾತಿ ಇಲ್ಲದಿದ್ದಲ್ಲಿ ತಮ್ಮ ಅರ್ಜಿಯನ್ನು ಯಾವುದೇ ಮಾಹಿತಿ ನೀಡದೆ ತಿರಸ್ಕರಿಸಲಾಗುವುದು.
10. ಮೇಲ್ಕಂಡ ಸೌಲಭ್ಯಗಳನ್ನು ಪಡೆಯಲು ಫಲಾನುಭವಿಯ ಕುಟುಂಬದ ವಾರ್ಷಿಕ ವರಮಾನ ಸಾಮಾನ್ಯ ಸೌಲಭ್ಯಗಳನ್ನು ಪಡೆಯಲು ರೂ 3.00 ಲಕ್ಷಗಳು ಹಾಗೂ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ಪಡೆಯಲು ರೂ. 2.50 ಲಕ್ಷಗಳಿಗೆ ಮೀರಿರಬಾರದು ಅವಧಿ ಮೀರಿ ಬಂದ ಹಾಗೂ ಸರಿಯಾದ ದಾಖಲೆಗಳಿಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಛೇರಿ ವೇಳೆಯಲ್ಲಿ ನಲ್ಮ್ ವಿಭಾಗದಲ್ಲಿ ಪಡೆಯಬಹುದು.

**ಸಹಿ/- ಪೌರಾಯುಕ್ತರು, ನಗರಸಭೆ, ರಾಣೇಬೆನ್ನೂರು.**


## ತೊಗಟವೀರ ಸಮುದಾಯ ಭವನ, ದಾವಣಗೆರೆ ಇಲ್ಲಿ ಭಾರಿ ರಿಯಾಯಿತಿ ಮಾರಾಟ

ಸೂಚನೆ : ಕಳೆದ ಕರೋನಾ ಮಹಾಮಾರಿ ಕಾರಣದಿಂದ ಲಾಕ್‌ಡೌನ್ ಸಂದರ್ಭದಲ್ಲಿ ಆನ್‌ಲೈನ್ ಶಾಪಿಂಗ್ ಟ್ರೆಂಡ್ ಹೆಚ್ಚಾಗಿದ್ದರಿಂದ ಸ್ಥಳೀಯ ಬಟ್ಟೆ ವ್ಯಾಪಾರಿಗಳು ಫ್ಯಾಕ್ಟರಿಗಳಿಂದ ಅತೀ ಕಡಿಮೆ ಪ್ರಮಾಣದ ಬಟ್ಟೆಗಳನ್ನು ಖರೀದಿಸುತ್ತಿದ್ದಾರೆ. ಇದರ ಫಲವಾಗಿ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಸರಕುಗಳು ಫ್ಯಾಕ್ಟರಿಯಲ್ಲಿಯೇ ಶೇಖರಿಸಲ್ಪಟ್ಟಿವೆ. ಫ್ಯಾಕ್ಟರಿಯಲ್ಲಿನ ಎಲ್ಲಾ ಲೇಟೆಸ್ಟ್ ಫ್ಯಾಶನ ಬಟ್ಟೆಗಳು, ಲೇಡಿಸ್, ಜೆಂಟ್ಸ್ ಮತ್ತು ಮಕ್ಕಳ ಉಡುಪುಗಳು ಈಗ ಕೇವಲ 200/- ರಿಂದ 350 /- ರೂಪಾಯಿಗಳಲ್ಲಿ

**ಇಡೀ ದೇಶದ ಗಾರ್ಮೆಂಟ್ಸ್ ಸಿದ್ಧಪಡಿಸುವ ಕಂಪನಿಗಳ ಐತಿಹಾಸಿಕ ನಿರ್ಣಯ**

**ಹೋಲ್‌ಸೇಲರ್ಸ್, ಸೆಮಿ ಹೋಲ್‌ಸೇಲರ್ಸ್, ಕಮಿಷನ್ ಏಜೆಂಟ್ಸ್ ಮತ್ತು ರಿಟೇಲ್ ಮಾರಾಟಗಾರರ ಭಾರಿ ಲಾಭ ಮುಗಿಯಿತು. ಈಗ ಲಾಭವು ನೇರವಾಗಿ ರಿಟೇಲ್ ಗ್ರಾಹರಿಗೆ**

ಸಾವಿರಾರು ವಿವಿಧ ಪ್ರಕಾರ ಲೇಡೀಸ್ ಮತ್ತು ಜೆಂಟ್ಸ್, ಕಿಡ್ಸ್, ಬ್ರಾಂಡೆಡ್ ಗ್ರಾರ್ಮೆಂಟ್ಸ್ ಶರ್ಟ್ಸ್, ಟೀ-ಶರ್ಟ್ಸ್, ಫ್ಯಾಂಟ್, ಲೋವೇರ್, ಬರ್ಮುಡಾ, ಲೇಡಿಸ್ ಟಾಪ್, ಲೇಡಿಸ್ ಪ್ಯಾಂಟ್, ವೆಸ್ಟರ್ನ್ ಟಾಪ್, ಕುರ್ತಿ, ಲೇಡಿಸ್ ಪೈಜಾಮ್, ಪ್ಲಾಜೊ, ಲೋವರ್ ಇತ್ಯಾದಿ.




**ರಿಯಾಯಿತಿ ಕಡಿತಗೊಳಿಸಿದ ನಂತರ**

**ರೂ. 200/- ರಿಂದ 350/-**

ಸೂಚನೆ : ಕಂಪನಿ ಪಾಲಿಸಿಗಳ ಪ್ರಕಾರ ಬ್ರ್ಯಾಂಡ್‌ಗಳ ಹೆಸರನ್ನು ನಮೂದಿಸಲು ನಮಗೆ ನಿರ್ಬಂಧವಿದೆ. ಈ ಅಗ್ಗದ ದರದಲ್ಲಿ ಅಂತ ಬ್ರ್ಯಾಂಡ್‌ಗಳನ್ನು ನೋಡಿ ನಿಮಗೆ ಆಶ್ಚರ್ಯವಾಗುತ್ತದೆ.

ವಿಶೇಷ ಕೌಂಟರ್ : ಜಂಟ್ಸ್ ಬ್ರಾಂಡೆಡ್ ಪ್ಯಾಂಟ್, ಸಿಲ್ಕೀ ಕಾಟನ್, ಮಸ್ಸರೈಸ್ ಕಾಟನ್, ಡೆನಿಮ್, ಶರ್ಟ್ಸ್, ಆಫೀಸ್‌ವೇರ್ ಶರ್ಟ್ಸ್, ಪಾರ್ಟಿವೇರ್‌ಶರ್ಟ್ಸ್, ಫಾರ್ಮಲ್ ಶರ್ಟ್ಸ್, ಟಿ-ಶರ್ಟ್ಸ್, ಜಂಟ್ಸ್ ಲೋವರ್, ಕಾಟನ್ ಟ್ರೌಜರ್ಸ್, ಜೀನ್ಸ್ ಮಲ್ಟಿಬ್ರಾಂಡ್ ಡಿಸೈನರ್ ಕುರ್ತಿ, ಪಾರ್ಟಿವೇರ್ ಕುರ್ತಿ, ಇತ್ಯಾದಿ ರೂ 450/- ರಿಂದ 599/-

MRP 200/-, 250/-, 300/- ರೂ. **50/-** ಬ್ರಾಂಡೆಡ್ ಬ್ರಾ & ಪ್ಯಾಂಟೀಸ್ ಕೇವಲ



ಕಾಟನ್ ಚಿಕನ್ ಬ್ರಾ, ಸ್ಟ್ರೆಚಬಲ್ ಬ್ರಾ, ಅಲ್ಟ್ರಾ ಮಾಡೆಲ್ ಬ್ರಾ, ಮಿಸ್‌ವರ್ಲ್ಡ್ ಬ್ರಾ, ಇಂಪೋರ್ಟೆಡ್ ಬ್ರಾ, ಸ್ಪೋರ್ಟ್ಸ್ ಬ್ರಾ

ಸಿಲ್ಕ್ ಪ್ಯಾಂಟೀಸ್, ಪ್ರಿಂಟೆಡ್ ಕಾಟನ್ ಪ್ಯಾಂಟೀಸ್, ಅಲ್ಟ್ರಾ ಮಾಡೆಲ್ ಪ್ಯಾಂಟೀಸ್, ಇಂಪೋರ್ಟೆಡ್ ಪ್ಯಾಂಟೀಸ್

ಕೇವಲ ರೂ. **50/-**

ನೇರವಾಗಿ ಸೀರೆ ಮಿಲ್ ಮುಖಾಂತರ ರೀಟೇಲ್ ಗ್ರಾಹಕರಿಗೆ


* ಕಾಟನ್ ಪ್ರಿಂಟೆಡ್ ಸೀರೆ
* ಜಾರ್ಜೆಟ್ ಪ್ರಿಂಟೆಡ್ ಸೀರೆ
* ಶಿಫಾನ್ ಸೀರೆ * ಇಟಾಲಿಯನ್ ಕ್ರೇಪ್ ಸೀರೆ
* ಪಾರ್ಟಿವೇರ್ ಸೀರೆ * ಲೈಟ್ ವೇಟ್ ಸೀರೆ
* ರಿಚ್ ಪಲ್ಲು ಸೀರೆ



ಸಾವಿರಾರು ಬಗೆಯ ಫ್ಯಾನ್ಸಿ, ಕಾಟನ್ ಮತ್ತು ಸಿಲ್ಕ್ ಸೀರೆ

ಕೇವಲ ರೂ.**150/-** ರಿಂದ **250/-** ಮಾತ್ರ

ಬ್ರಾಂಡೆಡ್ ಡಿಸೈನರ್ ಲೇಡಿಸ್ ಕುರ್ತಿ



* ಕಾಟನ್ ಪ್ರಿಂಟೆಡ್ ಕುರ್ತಿ
* ಬ್ರಾಂಡೆಡ್ ರಾಜಸ್ಥಾನಿ ಲಾಂಗ್ ಕುರ್ತಿ
* ಶ್ರೀ ಡಿಸೈನರ್ ಕುರ್ತಿ
* ಇಲಿನಿ ಬ್ರಾಂಡ್ ಕುರ್ತಿ
* ಇತರೆ ಬ್ರಾಂಡೆಡ್ ಕುರ್ತಿ

ಕೇವಲ ರೂ.**450/-** ರಿಂದ **600/-** ಮಾತ್ರ

**ಸೇಲ್ 4 ದಿನಗಳ ಮಾತ್ರ 7,8,9, ಮತ್ತು 10ನೇ ಅಕ್ಟೋಬರ್**

**ಸಮಯ : ಬೆಳಗ್ಗೆ 10 ರಿಂದ ರಾತ್ರಿ 9 ರವೆಗೆ** Parking Free, No Lunch Break

**ತೊಗಟವೀರ ಸಮುದಾಯ ಭವನ**

ನಂ. 2257, 6ನೇ ಮುಖ್ಯ ರಸ್ತೆ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.

Customer Care No. : 77957 10735 ಸೇಲ್ಸ್ ಬಾಯ್ಸ್ ಗರ್ಲ್ಸ್ ಬೇಕಾಗಿದ್ದಾರೆ

All Major Debit /Credit Cards, Google Pay, Phone Pe Accepted

ಸೂಚನೆ : ಸರಕಾರದಿಂದ ನಿರ್ದೇಶಿಸಲಾದ ಮಾಸ್ಕ್ ಮತ್ತು ಸಾಮಾಜಿಕ ಅಂತರ ಕಡ್ಡಾಯ

# ದಾವಣಗೆರೆ ಷುಗರ್ಸ್‌ನಲ್ಲಿ ಕಬ್ಬು ಅರೆಯುವಿಕೆಗೆ ಚಾಲನೆ



ದಾವಣಗೆರೆ,ಅ.6- ತಾಲ್ಲೂಕಿನ ಕುಕ್ಕುವಾಡ ಗ್ರಾಮದಲ್ಲಿರುವ ದಾವಣಗೆರೆ ಷುಗರ್ ಕಂಪನಿಯಲ್ಲಿ 2020-21ನೇ ಸಾಲಿನ ಕಬ್ಬು ಅರೆಯುವ ಕಾರ್ಯವನ್ನು ಇಂದು ಆರಂಭಿಸಲಾಯಿತು. ಕಂಪನಿಯ ವ್ಯವಸ್ಥಾಪಕ ನಿರ್ದೇಶಕರೂ ಆಗಿರುವ ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್ ಅವರೊಂದಿಗೆ ನಿರ್ವಾಹಕ ನಿರ್ದೇಶಕ ಅಭಿಜಿತ್ ಜಿ. ಶಾಮನೂರು ಮತ್ತು ಶ್ರೀಮತಿ ಸ್ವಾತಿ ಅಭಿಜಿತ್ ಶಾಮನೂರು ದಂಪತಿ ಶ್ರೀ ಗಣಪತಿ - ಶ್ರೀ ಸರಸ್ವತಿ - ಶ್ರೀ ಲಕ್ಷ್ಮಿ ಪೂಜಾ ಸಮಾರಂಭವನ್ನು ನೆರವೇರಿಸುವುದರ ಮೂಲಕ ಕಬ್ಬು ಅರೆಯುವಿಕೆಗೆ ಚಾಲನೆ ನೀಡಿದರು.

ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು, ಕಬ್ಬು ಬೆಳೆಗಾರರು, ರೈತ ಬಾಂಧವರು ಕಾರ್ಖಾನೆಯ ಆಡಳಿತಾಧಿಕಾರಿಗಳು, ನೌಕರರು, ಕಾರ್ಮಿಕ ವರ್ಗದವರು ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಕಪ್ಪು ಕುಳಿ, ಬಾಹ್ಯಾಕಾಶ ಸಂಶೋಧನೆಗಾಗಿ ಮೂವರಿಗೆ ಭೌತಶಾಸ್ತ್ರದ ನೊಬೆಲ್

ಸ್ಟಾಕ್‌ಹೋಮ್, ಅ. 6 - ಕಪ್ಪು ಕುಳಿಗಳನ್ನು ಕಂಡು ಹಿಡಿದ ರೋಡರ್ ಪೆನ್‌ರೋಸ್ ಹಾಗೂ ನಕ್ಷತ್ರಪುಂಜದ ಮಧ್ಯ ಇರುವ ಸೂಪರ್‌ಮಾಸಿವ್ ವಸ್ತುವನ್ನು ಕಂಡು ಹಿಡಿದ ರೀನ್‌ಹಾರ್ಡ್ ಜೆನ್ಜೆಲ್ ಹಾಗೂ ಆಂಡ್ರಿಯಾ ಘೇಜ್ ಅವರಿಗೆ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. ಸೋಮವಾರ ಔಷಧೀಯ ವಲಯಕ್ಕೆ ಪ್ರಶಸ್ತಿ ಪ್ರಕಟಿಸಲಾಗಿತ್ತು. ರಸಾಯನ ಶಾಸ್ತ್ರ, ಸಾಹಿತ್ಯ, ಶಾಂತಿ ಹಾಗೂ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಇನ್ನೂ ಪ್ರಕಟಿಸಬೇಕಿದೆ.

# ಜಿಲ್ಲೆಯಲ್ಲಿ ಲಿಂಪಿ ಸ್ಕಿನ್ ತಡೆಗೆ 50 ಸಾವಿರ ಲಸಿಕೆಗೆ ಬೇಡಿಕೆ

ದಾವಣಗೆರೆ, ಅ. 6 - ಪಶು ಸಂಗೋಪನಾ ಇಲಾಖೆಯು ಹಸು - ಎತ್ತುಗಳಿಗೆ ಕಾಲುಬಾಯಿ ರೋಗಕ್ಕೆ ಲಸಿಕೆ ಹಾಕುವ ಸಿದ್ಧತೆಯಲ್ಲಿರು ವಾಗಲೇ, ಜಿಲ್ಲೆಯ ಹಲವೆಡೆ ಲಂಪಿ ಸ್ಕಿನ್ ಡಿಸೀಸ್ (ಸಿಡುಬು ಚರ್ಮ ಗಂಟು ರೋಗ) ಕಾಣಿಸಿಕೊಂಡಿದೆ.

ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ಕಂಡು ಬರುತ್ತಿದ್ದ ಈ ರೋಗ, ಕರ್ನಾಟಕದಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡಿದೆ. ಅದರಲ್ಲೂ ಕಲಬುರಗಿ, ಯಾದಗಿರಿ, ಹಾಸನ, ಬೆಂಗಳೂರು ಗ್ರಾಮಾಂತರ, ಉಡುಪಿ, ಉತ್ತರ ಕನ್ನಡ, ಬೀದರ್, ಕೊಪ್ಪಳ, ರಾಯಚೂರು ಮುಂತಾದ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹರಡಿದೆ.

ಜಿಲ್ಲೆಯಲ್ಲೂ ಚನ್ನಗಿರಿ ಮತ್ತು ಹೊನ್ನಾಳಿಗಳಲ್ಲಿ ರೋಗಬಾಧೆ ಕಾಣಿಸಿಕೊಂಡಿದೆ. ಸುಮಾರು 120 ಗ್ರಾಮಗಳ 700ಕ್ಕೂ ಹೆಚ್ಚು ಜಾನುವಾರುಗಳಲ್ಲಿ ರೋಗ ಇರುವುದು ಕಂಡು ಬಂದಿದೆ.

ಕ್ಯಾಪ್ರೈನ್ ಪಾಕ್ಸ್ ಎಂಬ ವೈರಾಣುವಿನಿಂದ ಬರುವ ಈ ರೋಗದಿಂದಾಗಿ ರಾಸುಗಳ ಚರ್ಮ ಮತ್ತು ದೇಹದ ತುಂಬೆಲ್ಲಾ 2ರಿಂದ 5 ಸೆಂ.ಮೀ.ವರೆಗಿನ ವ್ಯಾಸದಲ್ಲಿ ಗಂಟಾಗುತ್ತವೆ. ನೊಣಗಳ ಹಾವಳಿಯಿಂದ ಚರ್ಮದಲ್ಲಿ ಆಳವಾದ ರಂಧ್ರಗಳಾಗುತ್ತವೆ. ಬಾಯಿ, ನಾಲಿಗೆ, ಕರುಳು, ಶ್ವಾಸಕೋಶ, ಗರ್ಭಕೋಶದಲ್ಲಿಯೂ ಗಂಟು ಕಾಣಿಸಿಕೊಳ್ಳಬಹುದು.

ಈ ರೋಗದಿಂದ ರಾಸುಗಳು 2-3 ವಾರಗಳಲ್ಲಿ ಚೇತರಿಸಿಕೊಳ್ಳುತ್ತವಾದರೂ, ಶೇ.1-2ರ ಪ್ರಮಾಣದಲ್ಲಿ ಸಾವು ಸಂಭವಿಸುವ ಅಪಾಯವಿದೆ. ಹೀಗಾಗಿ ರೋಗ ಕಂಡು ಬಂದ ತಕ್ಷಣವೇ ಎಚ್ಚರಿಕೆ ವಹಿಸಬೇಕಿದೆ.

ಸೊಳ್ಳೆ, ಕಚ್ಚುವ ನೊಣ, ಉಣ್ಣೆಗಳಿಂದ ಪ್ರಮುಖವಾಗಿ ಈ ರೋಗ ಹರಡುತ್ತದೆ. ರಾಸುವಿನ ಕೀವು, ರಕ್ತ, ದೈಹಿಕ ಸ್ರಾವಗಳ ನೇರ ಸಂಪರ್ಕದಿಂದ ರೋಗ ಅಂಟಬಹುದು. ಹೀಗಾಗಿ ರೋಗಕ್ಕೆ ಗುರಿಯಾದ ರಾಸುಗಳನ್ನು ಪ್ರತ್ಯೇಕವಾಗಿಡುವ ಅಗತ್ಯವಿದೆ ಎಂದು ಪಶುಪಾಲನೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

**ಲಸಿಕೆಗೆ ಕ್ರಮ :** ಸಿಡುಬು ಚರ್ಮ ಗಂಟು ರೋಗಕ್ಕೆ ನೇರ ಲಸಿಕೆ ಇಲ್ಲ. ಆದರೆ, ಮೇಕೆ ಸಿಡುಬು ನಿರೋಧಕ ಲಸಿಕೆ ಉಪಯುಕ್ತ ಎಂಬುದು ಕಂಡು ಬಂದಿದೆ. ಹೀಗಾಗಿ 50 ಸಾವಿರ ಲಸಿಕೆಗೆ ಮನವಿ ಸಲ್ಲಿಸಲಾಗಿದೆ. ಇನ್ನೂ ಲಸಿಕೆ ಬಂದಿಲ್ಲ, ಬಂದ ತಕ್ಷಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪಶುಸಂಗೋಪನಾ ಇಲಾಖೆಯ ಉಪ ನಿರ್ದೇಶಕ ಡಾ. ಸಿ. ಭಾಸ್ಕರ ನಾಯ್ಕ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ 3.28 ಲಕ್ಷ ರಾಸುಗಳಿಗೆ ಕಾಲುಬಾಯಿ ರೋಗ ಲಸಿಕೆ ಹಾಕಲು ಸೋಮವಾರದಿಂದ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹೀಗಾಗಿ ಎರಡೂ ಲಸಿಕೆಗಳನ್ನು ಒಟ್ಟಿಗೆ ಹಾಕುವುದು ಸಮಸ್ಯೆಯಾಗಲಿದೆ.

**ಜಿಲ್ಲೆಯಲ್ಲಿ 700 ರಾಸುಗಳಲ್ಲಿ ಕಾಣಿಸಿಕೊಂಡ ವೈರಲ್ ಸೋಂಕು**



**ಜಿಲ್ಲೆಯಲ್ಲಿ ಯಾವುದೇ ಜಾನುವಾರು ಸಿಡುಬು ಚರ್ಮ ಗಂಟು ರೋಗದಿಂದ ಸಾವನ್ನಪ್ಪಿಲ್ಲ. ರೋಗ ತಡೆಯಲು ಜಿಲ್ಲೆಗೆ 50 ಸಾವಿರ ಲಸಿಕೆ ಕೇಳಿದ್ದೇವೆ. ಬಂದ ತಕ್ಷಣ ರಾಸುಗಳಿಗೆ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು.**

**- ಡಾ. ಸಿ. ಭಾಸ್ಕರ ನಾಯ್ಕ,**
ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ

ಸಿಡುಬು ಚರ್ಮ ಗಂಟು ರೋಗ ಇರುವ ಗ್ರಾಮಗಳನ್ನು ಬಿಟ್ಟು ಉಳಿದೆಡೆ ಕಾಲುಬಾಯಿ ಲಸಿಕೆ ಹಾಕಲಾಗುತ್ತಿದೆ. ನಂತರದಲ್ಲಿ ಸಿಡುಬು ಚರ್ಮ ಗಂಟು ರೋಗಕ್ಕೆ ಲಸಿಕೆ ಹಾಕಲಾಗುವುದು ಎಂದವರು ವಿವರಿಸಿದ್ದಾರೆ.

**ಆತಂಕ ಬೇಡ :** ಜಿಲ್ಲೆಯಲ್ಲಿ ಈ ರೋಗದಿಂದ ಇದುವರೆಗೂ ಯಾವುದೇ ದನ - ಹಸುಗಳ ಸಾವು ಸಂಭವಿಸಿಲ್ಲ. ಸೋಂಕಿನಿಂದ ಜ್ವರ ಬಂದಾಗ ಸುಸ್ತು, ಹಾಲು ಕಡಿಮೆಯಂತಹ ಸಮಸ್ಯೆಗಳು ಮಾತ್ರ ಕಂಡು ಬಂದಿವೆ ಎಂದು ಡಾ. ನಾಯ್ಕ ತಿಳಿಸಿದ್ದಾರೆ.

ರೋಗ ತಡೆಯಲು ರಾಸುಗಳನ್ನು ಪ್ರತ್ಯೇಕವಾಗಿರಿಸಬೇಕು. ವೈದ್ಯರ ಬಳಿ ತೆರಳಿ ಚಿಕಿತ್ಸೆ ಪಡೆಯುವ ಜೊತೆಗೆ ನೊಣ - ಸೊಳ್ಳೆ ಬಾಧೆಯಿಂದ ಮುಕ್ತವಾಗಿರಬೇಕು ಎಂದವರು ಹೇಳಿದ್ದಾರೆ.

**ಮನುಷ್ಯರಿಗೆ ಸಮಸ್ಯೆಯಿಲ್ಲ :** ಈ ವೈರಸ್ ಕಾರಣದಿಂದ ಮನುಷ್ಯರಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ. ಹಾಲನ್ನು ಕುದಿಸಿ ಕುಡಿಯುವುದರಿಂದ ಆ ಮೂಲಕವೂ ರೋಗ ಬರುವ ಸಾಧ್ಯತೆ ಇಲ್ಲ ಎಂದವರು ತಿಳಿಸಿದ್ದಾರೆ.

ಕೋವಿಡ್ ಹರಡಿರುವ ನಡುವೆಯೇ ಸಿಡುಬು ಚರ್ಮ ಗಂಟು ರೋಗ ಬಂದಿದೆ. ಕಾಲುಬಾಯಿ ರೋಗಕ್ಕೂ ಲಸಿಕೆ ಹಾಕಬೇಕಿದೆ. ಸೂಕ್ತ ಮುನ್ನೆಚ್ಚರಿಕೆಯೊಂದಿಗೆ ಎರಡೂ ಸೋಂಕುಗಳನ್ನು ನಿಭಾಯಿಸಲಾಗುತ್ತಿದೆ ಎಂದವರು ಹೇಳಿದ್ದಾರೆ.

# ಲಕ್ಕಿ ಡ್ರಾ ನೆಪದಲ್ಲಿ 2 ಲಕ್ಷಕ್ಕೂ ಅಧಿಕ ಹಣ ವಂಚನೆ

ದಾವಣಗೆರೆ, ಅ.6- ಆನ್ ಲೈನ್ ಶಾಪಿಂಗ್ ಕಂಪನಿಯ ಅಧಿಕಾರಿ ಹೆಸರಿನಲ್ಲಿ ಲಕ್ಕಿ ಡ್ರಾ ನೆಪದಲ್ಲಿ ಸುಮಾರು 2 ಲಕ್ಷಕ್ಕೂ ಅಧಿಕ ಹಣವನ್ನು ಆನ್ ಲೈನ್ ಮೂಲಕ ದೋಚಿ ವಂಚಿಸಿರುವ ಬಗ್ಗೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಚನ್ನಗಿರಿ ಪಟ್ಟಣದ ಉಪ್ಪಾರಪೇಟೆಯ ಸಿ.ಹೆಚ್. ವೆಂಕಟೇಶ ವಂಚನೆಗೊಳಗಾದವರು.

ನ್ಯಾಪ್ಟಾಲ್ ಆನ್ ಲೈನ್ ಶಾಪಿಂಗ್ ಕಂಪನಿ ಹೆಸರಿನಲ್ಲಿ ಮನೆ ವಿಳಾಸಕ್ಕೆ ನನ್ನ ಹೆಸರಿಗೆ ಬಂದಿದ್ದ ಪೋಸ್ಟ್ ನೋಡಿದಾಗ ಮಹೀಂದ್ರ ಕಂಪನಿಯ ಕಾರು ಬಹುಮಾನವಾಗಿ ಗೆದ್ದಿರುವುದಾಗಿ ಬರೆಯಲಾಗಿತ್ತು. ಅದರಲ್ಲಿದ್ದ ಸಹಾಯವಾಣಿ ಅಧಿಕಾರಿಯ ಮೊಬೈಲ್ ನಂಬರ್ ಗೆ ಸಂಪರ್ಕಿಸಿದಾಗ ಮಾತನಾಡಿದ ಅಪರಿಚಿತನು, ತಾನು ರಾಘವೇಂದ್ರ ಎಂಬುದಾಗಿ ಪರಿಚಿತನಾಗಿ ಕಾರು ಬಹುಮಾನವಾಗಿ ಬಂದಿದ್ದು, ಕಾರು ಬೇಡವೆಂದರೆ 14 ಲಕ್ಷದ 80 ಸಾವಿರ ರೂ. ಪಡೆಯಬಹುದು. ಹಣವನ್ನು ಪಡೆಯಲು ಶೇ. 1ರಷ್ಟು ಕಮೀಷನ್ ಹಣವಾಗಿ 14 ಸಾವಿರದ 800 ಕಟ್ಟಬೇಕೆಂದು ನಂಬಿಸಿದನು. ಮೊಬೈಲ್ ವಾಟ್ಸಾಪ್ ಗೆ ಅಪರಿಚಿತನು ಬ್ಯಾಂಕ್ ಖಾತೆ ನಂಬರ್ ಕಳಿಸಿ ಬಹುಮಾನದ ಹಣಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ತೆರಿಗೆ, ಜಿಎಸ್ ಟಿ ಎಂದು 2 ಲಕ್ಷಕ್ಕೂ ಅಧಿಕ ಹಣ ಕಟ್ಟಬೇಕೆಂದಾಗ ಹಂತ ಹಂತವಾಗಿ ಆನ್ ಲೈನ್ ಮೂಲಕ ಅಪರಿಚಿತ ನೀಡಿದ್ದ ಬ್ಯಾಂಕ್ ಖಾತೆಗೆ ಜಮೆ ಮಾಡಲಾಯಿತು. ಲಕ್ಕಿ ಡ್ರಾ ನೆಪದಲ್ಲಿ ವಂಚಿಸಿರುವುದಾಗಿ ವೆಂಕಟೇಶ್ ದೂರಿದ್ದಾರೆ.

# ನಗರಕ್ಕೆ ಎಡಿಜಿಪಿ ಭಾಸ್ಕರ್‌ರಾವ್ ಭೇಟಿ



ದಾವಣಗೆರೆ,ಅ.6- ರಾಜ್ಯದ ಆಂತರಿಕ ಭದ್ರತೆಯ ಎ.ಡಿ.ಜಿ.ಪಿ. ಭಾಸ್ಕರ್ ರಾವ್ ಅವರು ಖಾಸಗಿ ಭೇಟಿಗಾಗಿ ಇಂದು ನಗರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಮುದೇಗೌಡ್ರ ವಿಶ್ವನಾಥ್ ಅವರ ಮನೆಗೆ ಭೇಟಿ ನೀಡಿದ್ದರು. ಮಹಾಪೌರರಾದ ಬಿ.ಜಿ. ಅಜಯ್ ಕುಮಾರ್, ಎಸ್ಪಿ ಹನುಮಂತರಾಯ, ಮಾಜಿ ಶಾಸಕ ಬಿ.ಪಿ. ಹರೀಶ್, ಮುಖಂಡ ಎನ್.ಜಿ.ಪುಟ್ಟಸ್ವಾಮಿ, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ಮತ್ತಿತರರು ಉಪಸ್ಥಿತರಿದ್ದರು.

# ನಗರದಲ್ಲಿಂದು ರೈತರಿಂದ ವಿನೂತನ ಚಳುವಳಿ

ಮೆಕ್ಕೆಜೋಳ ಮತ್ತು ಭತ್ತ ಖರೀದಿ ಕೇಂದ್ರ ತೆರೆಯುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ನೇತೃತ್ವದಲ್ಲಿ ಮಾಯಕೊಂಡದ ನಾಡ ಕಚೇರಿ ಎದುರು ಭಿಕ್ಷಾಟನೆ ಮಾಡುವ ಮುಖೇನ ಇಂದು ವಿನೂತನ ಚಳುವಳಿ ನಡೆಸುವುದಾಗಿ ಸಂಘಟನೆಯ ಸಂಘಟನಾ ಕಾರ್ಯದರ್ಶಿ ಬಲ್ಲೂರು ರವಿಕುಮಾರ್, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಅಣಬೇರು ಕುಮಾರಸ್ವಾಮಿ ತಿಳಿಸಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೆಕ್ಕೆಜೋಳವನ್ನು ಪ್ರತಿ ಕ್ವಿಂಟಾಲ್ ಗೆ 1850 ರೂ. ನಿಗದಿ ಮಾಡಿದ್ದು, ಮಾರುಕಟ್ಟೆಯಲ್ಲಿ 900ರಿಂದ 1000 ಕ್ಕೆ ಮಾರಾಟವಾಗುತ್ತಿದೆ. ಭತ್ತ ಪ್ರತಿ ಕ್ವಿಂಟಾಲ್ ಗೆ 1840 ರೂ. ನಿಗದಿ ಮಾಡಿದ್ದು, ಮಾರುಕಟ್ಟೆಯಲ್ಲಿ 1300 ರಿಂದ 1400 ಕ್ಕೆ ಮಾರಾಟವಾಗುತ್ತಿದೆ. ಮೆಕ್ಕೆಜೋಳದಲ್ಲಿ 800 ರೂ. ನಷ್ಟ, ಭತ್ತದಲ್ಲಿ 500ರಿಂದ 600 ರೂ. ನಷ್ಟವಾಗುತ್ತಿದೆ. ಇದು ಕೇಂದ್ರ ಸರ್ಕಾರಕ್ಕೂ ಅವಮಾನವೆಂದು ಬಲ್ಲೂರು ರವಿಕುಮಾರ್ ಹೇಳಿದ್ದಾರೆ.

# ಏತ ನೀರಾವರಿಗೆ ಹೆಚ್ಚುವರಿ 167 ಕೋಟಿ

**ಸಾಸ್ವೆಹಳ್ಳಿ**

ದಾವಣಗೆರೆ, ಅ.6- ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಗೆ 167 ಕೋಟಿ ರೂ. ಮಂಜೂರಾತಿ ದೊರಕಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ.

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ಕರ್ನಾಟಕ ನೀರಾವರಿ ನಿಗಮ, ಮಂಡಳಿ ಸಭೆಯಲ್ಲಿ ಈ ಮಂಜೂರಾತಿ ದೊರೆತಿದೆ.

ಈಗಾಗಲೇ ನಡೆಸಿದ ಸರ್ವೆ ವರದಿಯಲ್ಲಿ ಕಂಡುಬಂದ ನ್ಯೂನತೆಗಳನ್ನು ಸರಿಪಡಿಸಿ, ಕೆಲವೊಂದು ಕೆರೆಗಳಿಗೆ ಸಾಮರ್ಥ್ಯಕ್ಕೆ ತಕ್ಕಂತೆ ನೀರು ಹರಿಸಲು ಈ ಯೋಜನೆಗೆ ಹೆಚ್ಚುವರಿಯಾಗಿ 167 ಕೋಟಿ ರೂ. ಕ್ರಿಯಾ ಯೋಜನೆ ಸಿದ್ದಪಡಿಸಿ ಸಿ.ಎಂ ಗೆ ಸಲ್ಲಿಸಲಾಗಿತ್ತು.

ಲೋಕಸಭಾ ಅಧಿವೇಶನದ ವೇಳೆ ದೆಹಲಿಗೆ ಭೇಟಿ ನೀಡಿದ್ದ ಮುಖ್ಯಮಂತ್ರಿಗಳಿಗೆ ಸಂಸದ ಸಿದ್ದೇಶ್ವರ ಅವರು ಸಾಸ್ವೆಹಳ್ಳಿ ಏತ ನೀರಾವರಿ ಯೋಜ ನೆಗೆ ಹೆಚ್ಚುವರಿ ಅನುದಾನ ಮಂಜೂರು ಮಾಡುವ ಅಗತ್ಯತೆ ಕುರಿತು ಮನವರಿಕೆ ಮಾಡಿಕೊಟ್ಟಿದ್ದಾರೆ.

## ಮಂದಿರ ಹುತಾತ್ಮರ ಸ್ಮರಣಾರ್ಥ ಕಾರ್ಯಕ್ರಮ ಮುಂದೂಡಿಕೆ

ದಾವಣಗೆರೆ, ಅ. 6 - ರಾಮ ಮಂದಿರ ಹೋರಾಟದಲ್ಲಿ ಹುತಾತ್ಮರಾದ ನಗರದ ಕರ ಸೇವಕರು ಹಾಗೂ ಜೈಲಿಗೆ ಹೋದವರಿಗೆ ಬಿಜೆಪಿ ವತಿಯಿಂದ ಆಯೋಜಿಸಲಾಗಿದ್ದ ಗೌರವ ಸಮರ್ಪಿಸುವ ಕಾರ್ಯಕ್ರಮವನ್ನು ಬರುವ ಡಿಸೆಂಬರ್‌ಗೆ ಮುಂದೂಡಲಾಗಿದೆ ಎಂದು ಹಿರಿಯ ಬಿಜೆಪಿ ಮುಖಂಡ ಆರ್. ಪ್ರತಾಪ್ ತಿಳಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊರೊನಾ ಹಿನ್ನೆಲೆಯಲ್ಲಿ ಸ್ಮರಣಾರ್ಥ ಕಾರ್ಯಕ್ರಮವನ್ನು ಮುಂದೂಡಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಕೆ.ಎನ್. ಓಂಕಾರಪ್ಪ, ಗುಡ್ಡಪ್ಪ, ಕುಮಾರ್, ಜಿ. ಗಣೇಶ ಕರೂರ್, ಅಕ್ಕಿ ಪ್ರಭು ಕಲಬುರ್ಗಿ, ಡಿ. ಬಸವರಾಜ ಗುಬ್ಬಿ ಮತ್ತಿತರರು ಉಪಸ್ಥಿತರಿದ್ದರು.

# 279 ಜನರಿಗೆ ದೃಢ

ದಾವಣಗೆರೆ, ಅ.6- ಜಿಲ್ಲೆಯಲ್ಲಿ ಮಂಗಳವಾರ 279 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದೆ. 127 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ದಾವಣಗೆರೆ ತಾಲ್ಲೂಕಿನಲ್ಲಿ 115, ಹರಿಹರ 64, ಜಗಳೂರು 12, ಚನ್ನಗಿರಿ 36, ಹೊನ್ನಾಳಿ 48 ಹಾಗೂ ಹೊರ ಜಿಲ್ಲೆಯ 4 ಜನರಲ್ಲಿ ಸೋಂಕು ಕಾಣಿಸಿ ಕೊಂಡಿದೆ. ಜಿಲ್ಲೆಯಲ್ಲಿ ಪ್ರಸ್ತುತ 1641 ಸಕ್ರಿಯ ಪ್ರಕರಣ ಗಳಿದ್ದು, ಇಲ್ಲಿಯವರೆಗೆ 17158 ಜನರಲ್ಲಿ ಸೋಂಕು ಕಾಣಿಸಿಕೊಂಡು, 15274 ಜನರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾರೆ.

## ಇಂದು ವಿದ್ಯುತ್ ವ್ಯತ್ಯಯ

ದಾವಣಗೆರೆ : ಹೊಸ ಕುಂದವಾಡ, ಹಳೇ ಕುಂದ ವಾಡ, ಕೆ.ಹೆಚ್.ಬಿ ಕಾಲೋನಿ, ಸಂಕೋಳ ಬಡಾ ವಣೆ, ಕುಂದುವಾಡ ಪೆಟ್ರೋಲ್ ಬಂಕ್ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಶಿರಾ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಅಮ್ಮಾಜಮ್ಮ ಕಣಕ್ಕೆ

ಬೆಂಗಳೂರು, ಅ. 6 – ಬಿ. ಸತ್ಯನಾರಾಯಣ ಅವರ ನಿಧನದ ಕಾರಣದಿಂದ ತೆರವಾಗಿದ್ದ ಶಿರಾ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಅವರ ಪತ್ನಿ ಅಮ್ಮಾಜಮ್ಮ ಅವರಿಗೆ ಟಿಕೆಟ್ ನೀಡುವುದಾಗಿ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ ತಿಳಿಸಿದ್ದಾರೆ.

ಅನುಕಂಪದ ಮತಗಳನ್ನು ಪಡೆಯಲು ಅಮ್ಮಾಜಮ್ಮ ಅವರನ್ನು ಜೆಡಿಎಸ್ ಕಣಕ್ಕಿಳಿಸಿರುವುದು ಸ್ಪಷ್ಟವಾಗಿದೆ. ಕಳೆದ ಆಗಸ್ಟ್ ತಿಂಗಳಲ್ಲಿ ಸತ್ಯನಾರಾಯಣ ನಿಧನರಾಗಿದ್ದರು. ತುಮಕೂರಿನ ಶಿರಾ ಹಾಗೂ ರಾಜರಾಜೇಶ್ವರಿ ನಗರ ಕ್ಷೇತ್ರಗಳಿಗೆ ನವೆಂಬರ್ 3ರಂದು ಉಪ ಚುನಾವಣೆ ನಡೆಯಲಿದೆ.

ಶಿರಾ ಕ್ಷೇತ್ರದಿಂದ ಮಾಜಿ ಸಚಿವ ಟಿ.ಬಿ. ಜಯಚಂದ್ರ ಅವರನ್ನು ಕಣಕ್ಕಿಳಿಸುವುದಾಗಿ ಕಾಂಗ್ರೆಸ್ ಈಗಾಗಲೇ ಪ್ರಕಟಿಸಿದೆ. ಈ ಕ್ಷೇತ್ರದಲ್ಲಿ ಜೆಡಿಎಸ್ ಹಾಗೂ ಕಾಂಗ್ರೆಸ್ ಸಾಂಪ್ರದಾಯಿಕ ಎದುರಾಳಿಗಳು. ಇಲ್ಲಿ ಬಿಜೆಪಿ ಎಂದೂ ಗೆದ್ದಿಲ್ಲ.


## ಪ್ರಥಮ ವರ್ಷದ ಚಿರಸ್ಮರಣೆ



**ಶ್ರೀ ಟಿ.ಎಸ್. ಶಿವಣ್ಣನವರು**
ಅಡುಗೆ ಕಂಟ್ರ್ಯಾಕ್ಟರ್, ವಿನೋಬನಗರ, ದಾವಣಗೆರೆ.
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ತೋರಿಸಿದ ಹಾದಿಯಲ್ಲಿ ಮುನ್ನಡೆಯುತ್ತಿರುವ ನಿಮ್ಮ ಕುಟುಂಬ ವರ್ಗದವರು
ಪತ್ನಿ : ✦ ಶ್ರೀಮತಿ ಗೌರಮ್ಮ ಶಿವಣ್ಣನವರು
ಮಕ್ಕಳು : ✦ ಎಸ್. ಬಸವರಾಜ್, ಶ್ರೀಮತಿ ರಾಜೇಶ್ವರಿ
✦ ಟಿ.ಎಸ್. ರುದ್ರೇಶ್, ಶ್ರೀಮತಿ ವಾಣಿಶ್ರೀ
✦ ಹೆಚ್.ಎಂ. ವೀರೇಶ್, ಶ್ರೀಮತಿ ಮಂಜುಳ
✦ ಕೆ.ಎಂ. ಗಂಗಾಧರ ಸ್ವಾಮಿ, ಶ್ರೀಮತಿ ವೀಣಾ
✦ ಹೆಚ್.ಎಂ. ರುದ್ರಮುನಿ ಸ್ವಾಮಿ, ಶ್ರೀಮತಿ ಹೇಮಲತಾ
ಮೊಮ್ಮಕ್ಕಳು : ✦ ಚಿ|| ಅಭಯ್ ✦ ಕು|| ಸನಿಹ
✦ ಮಹಡಿ ಮನೆ ವಂಶಸ್ಥರು, ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 05-10-2020ರಂದು ನಿಧನರಾದ
ನಮ್ಮ ಕೇಂದ್ರದ ಮಾಜಿ ಕಾರ್ಯದರ್ಶಿಗಳಾಗಿದ್ದ
**ಶ್ರೀ ಜಿ. ಶಿವಕುಮಾರ್ (ತುಂಗಾ)**
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಆಡಳಿತ ಮಂಡಳಿ ಸದಸ್ಯರು ಹಾಗೂ ಸರ್ವ ಸದಸ್ಯರು
**ದಾವಣಗೆರೆ ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಸೆಂಟರ್**
ವಿದ್ಯಾನಗರ, ದಾವಣಗೆರೆ.








JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte